# ಕರ್ನಾಟಕ ವಿಕಾಸ

ಅಕ್ಟೋಬರ್ 2011






ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಮಹಿಳಾ ಸದಸ್ಯರ
ಸಬಲೀಕರಣಕ್ಕಾಗಿ ದಿಟ್ಟ ಹೆಜ್ಜೆ



ದಸರಾ ಹಾಗೂ ದೀಪಾವಳಿ
ಹಬ್ಬದ ಶುಭಾಶಯಗಳು





ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ
ವಾರ್ಷಿಕ ವರದಿ ಬಿಡುಗಡೆ ಮಾಡಿದ ಶ್ರೀ ಜಗದೀಶ್ ಶೆಟ್ಟರ್,
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು



ಕನಕಪುರ ತಾಲ್ಲೂಕಿನ
ತೋಪೇಗೌಡನಹಳ್ಳಿಯಲ್ಲಿ
ರಸ್ತೆ ನಿರ್ಮಾಣ




ಪಿಲ್ಲೇಗೌಡನದೊಡ್ಡಿ ಗ್ರಾಮದಲ್ಲಿ
ರಸ್ತೆಬದಿಯ ಚರಂಡಿ ನಿರ್ಮಾಣ

# ಕರ್ನಾಟಕ ವಿಕಾಸ


ಅಕ್ಟೋಬರ್ 2011

ಸಂಪುಟ : 52 ಸಂಚಿಕೆ : 11


ಪ್ರಕಾಶಕರು
**ಪಿ. ಕುಮಾರ್**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು
**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು
**ಡಾ|| ಎಂ.ಎಸ್. ಮಂಜುನಾಥ**


## ಈ ಸಂಚಿಕೆಯಲ್ಲಿ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಡಾ. ಅಮಿತಾ ಪ್ರಸಾದ್ |
| 7 | ಪರಿಚಯ | |
| 8 | ಕಾವ್ಯ ವಿಕಾಸ | – ಇನಾಯತ್ ಪಾಷ. ಎಸ್ |
| 9 | ಮುಖಪುಟ ವರದಿ | |
| 11 | ಲೇಖನಗಳು | – ಡಾ. ಎಂ.ಆರ್. ಏಕಾಂತಪ್ಪ<br>– ಡಾ. ಕೆ.ವಿ. ದೇವರಾಜುಲು<br>– ಸತ್ಯಕಾಮ ಆರ್. ಕಟ್ಟಿ |
| 30 | ಸಂವಾದ | – ಇನಾಯತ್ ಪಾಷ. ಎಸ್ |
| 33 | ಯಶೋಗಾಥೆ | – ಟಿ. ವಿಜಯಕುಮಾರ್ |
| 36 | ಗ್ರಾಮ ಸ್ವರಾಜ್ | |
| 38 | ಸುತ್ತೋಲೆಗಳು | |


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**


**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**
ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
email:karnatakavikasa@ymail.com





ಮಾನ್ಯರೇ,

ಸೆಪ್ಟೆಂಬರ್ ತಿಂಗಳಲ್ಲಿ ಮೂಡಿ ಬಂದ ನಮ್ಮೆಲ್ಲರ ಅಚ್ಚುಮೆಚ್ಚಿನ ಪತ್ರಿಕೆಯಾದ ಕರ್ನಾಟಕ ವಿಕಾಸ ಪತ್ರಿಕೆಯು ತುಂಬಾ ಸೊಗಸಾಗಿ ಮೂಡಿ ಬಂದಿದ್ದು. ಮುಖಪುಟವು ಸಹ ಆಕರ್ಷಕವಾಗಿ ಬಂದಿದೆ. ಒಟ್ಟಾರೆ ಪತ್ರಿಕೆಯಲ್ಲಿ ಮೂಡಿಬರುತ್ತಿರುವ ಎಲ್ಲಾ ಅಂಕಣಗಳು ಮಹತ್ವಪೂರ್ಣದಾಯಕವಾಗಿದೆ. ಇದೇ ತರಹ ಮಹತ್ವದಾಯಕ ಸುದ್ದಿ ಸಾರಗಳು ಹೆಚ್ಚು ಪ್ರಕಟವಾಗಲೆಂದು ಹಾರೈಸುತ್ತೇನೆ.

– ನೀಲನಗೌಡ ಪಾಟೀಲ್

ಸಾಸರವಾಡ, ಹೊಳೆ ಇಟಗಿ ಪೋ||, ಶಿರಹಟ್ಟಿ ತಾ||, ಗದಗ ಜಿಲ್ಲೆ.

ಸೆಪ್ಟೆಂಬರ್ ತಿಂಗಳ ಕರ್ನಾಟಕ ವಿಕಾಸ ಪತ್ರಿಕೆಯು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಅದರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರಿಚಯ ಅವರವರ ಸಾಧನೆ ಮತ್ತು ವಿದ್ಯಾಭ್ಯಾಸವನ್ನು ತಿಳಿಸಿಕೊಟ್ಟಿದ್ದಕ್ಕೆ ವಂದನೆಗಳು.




– ಎನ್.ಎಮ್. ಪಾಟೀಲ್

ಕಿರಿಯ ತರಬೇತಿ ಅಧಿಕಾರಿ, ಶ್ರೀ ಜ.ಅ.ಕ್ವೆ.ತ. ಕೇಂದ್ರ, ಚಿಕ್ಕಟ್ಟಿ, ಶಿರಹಟ್ಟಿ ತಾ||, ಗದಗ ಜಿಲ್ಲೆ.

ಬದಲಾದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಶ್ರೀ ಡಿ.ವಿ. ಸದಾನಂದ ಗೌಡರ ಮುಖಪುಟ ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಖಾತೆಯನ್ನು 2ನೇ ಬಾರಿಗೆ ಅಧಿಕಾರ ಚುಕ್ಕಾಣಿಯನ್ನು ಹಿಡಿದಿರುವ ಶ್ರೀ ಜಗದೀಶ ಶೆಟ್ಟರ ಅವರ ಸಂಕ್ಷಿಪ್ತ ಪರಿಚಯದೊಂದಿಗೆ ಮೂಡಿಬಂದ ಸೆಪ್ಟೆಂಬರ್ ಸಂಚಿಕೆ ಮನಸ್ಸನ್ನು ಆಕರ್ಷಿಸಿತು.

– ಜಯವೀರ ಎ.ಕೆ.

ಖೇಮಲಾಪುರ – 591311, ತಾ|| ರಾಯಭಾಗ, ಜಿ|| ಬೆಳಗಾವಿ.

ಸೆಪ್ಟೆಂಬರ್ 2011ರ ಸಂಚಿಕೆ ಸುಂದರ ಮುದ್ರಣದೊಂದಿಗೆ ಸರ್ವಾಂಗ ಸುಂದರವಾಗಿ ಮೂಡಿಬಂದಿದೆ. ಹಾಗೆಯೆ ನಮ್ಮ ಮಾನ್ಯ ಮುಖ್ಯಮಂತ್ರಿಗಳ ನಗುಮೊಗದ ಭಾವಚಿತ್ರ ಎಲ್ಲರ ಮನಸ್ಸನ್ನು ಸೆಳೆಯುವಂತಿದೆ. ಡಾ|| ಅಮಿತಾ ಪ್ರಸಾದ್‌ರವರ ಸಂದೇಶ, ಪ್ರಶಸ್ತಿ ಪಡೆದ ಜಿಲ್ಲೆಗಳ ಯಶೋಗಾಥೆ ನಿಮಗೆ ಮಾದರಿಯಾಗಲಿ ಬರಹ ನಮ್ಮೆಲ್ಲರ ಹೊಣೆಯಾಗಿದೆ. ಅದರಂತೆ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಸದಸ್ಯರುಗಳಿಗೆ ಈ ಬರಹ ತುಂಬ ಉಪಯುಕ್ತವಾಗಿದೆ. ಪ್ರಾಮಾಣಿಕ ಬದುಕು ಸವೆಸಿದಲ್ಲಿ, ಮಾದರಿಯಾಗುವುದಲ್ಲಿ ಸಂಶಯವಿಲ್ಲ. ನಮ್ಮಲ್ಲಿನ ತ್ಯಾಗವೇ ನಮ್ಮ ದೇಶದ ಸಂಪತ್ತು ಎನ್ನುವುದನ್ನು ಈ ಬರಹ ತಿಳಿಸುತ್ತದೆ. ಕಷ್ಟಪಟ್ಟು ದುಡಿದರೆ ಅದರ ಪ್ರತಿಫಲ ನಿಮ್ಮ ಮನೆ ಬಾಗಿಲಿಗೆ ಬರಲಿದೆ ಎಂಬುದು ನೂರಕ್ಕೆ ನೂರು ಸತ್ಯದ ಮಾತು. ಗ್ರಾಮಗಳಲ್ಲಿ ನೀತಿಯುಕ್ತವಾಗಿ ಬಾಳಿದಲ್ಲಿ ಮಹಾತ್ಮಗಾಂಧಿಯವರ ಕನಸುಗಳು ನನಸಾಗುವ ಕಾಲ ದೂರವಿಲ್ಲ ಎನಿಸುತ್ತದೆ. ಕರ್ನಾಟಕ ವಿಕಾಸ ಈ ದಿಶೆಯಲ್ಲಿ ಶ್ರಮಿಸುತ್ತಿರುವುದು ಸ್ವಾಗತಾರ್ಹವಾಗಿದೆ.

– ರಾಜೇಂದ್ರ ಹೆಗಡೆ, ಹಾವೇರಿ

ಕಂದಾಯ ಇಲಾಖೆ, ಮಂಜುನಾಥ ನಗರ, ತಾಂಡೂರು ಕಟ್ಟಡ ಹತ್ತಿರ,
ಇಜಾದಿಲಕಮಾಪುರು ಗ್ರಾಮ, ಹಾವೇರಿ – 581180.

ಸಚಿವಾಲಯದಿಂದ ಸಂದೇಶ



ಡಾ. ಅಮಿತಾ ಪ್ರಸಾದ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.


ಬಂಧುಗಳೇ,

## 'ಗ್ರಾಮ ಸ್ವರಾಜ್ ಯೋಜನೆ' – ಸಾಧನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ವಿಶ್ವ ಬ್ಯಾಂಕ್ ಆರ್ಥಿಕ ನೆರವಿನಿಂದ ಅನುಷ್ಠಾನಗೊಳ್ಳುತ್ತಿರುವ ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಯ ಸಮಸ್ತರೆಲ್ಲರಿಗೂ ಹಾಗೂ ಸಾರ್ವಜನಿಕರಿಗೆ ಮಾಹಿತಿ ತಿಳಿದ ವಿಷಯವೇ ಆಗಿದೆ.

ಗ್ರಾಮ ಸ್ವರಾಜ್ 2006–07ನೇ ಆರ್ಥಿಕ ಸಾಲಿನಿಂದ ಆರಂಭಿಸಿ ಐದು ವರ್ಷಗಳ ಕಾಲಾವಧಿಯಲ್ಲಿ ಕರ್ನಾಟಕದಲ್ಲಿ ಅದರಲ್ಲೂ ಪ್ರಮುಖವಾಗಿ ರಾಜ್ಯದ 15 ಜಿಲ್ಲೆಗಳ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯತಿಗಳಲ್ಲಿನ ಗ್ರಾಮೀಣಾಭಿವೃದ್ಧಿಯನ್ನು ಧ್ಯೇಯವಾಗಿರಿಸಿಕೊಂಡು ಗ್ರಾಮೀಣ ಜನರ ಜೀವನ ಪದ್ಧತಿಯನ್ನು ಆರ್ಥಿಕವಾಗಿ ಸುಧಾರಿಸುವ ಗುರಿಗಳೊಂದಿಗೆ ರೂ. 600.00 ಕೋಟಿಗಳ ಯೋಜನಾ ಗಾತ್ರದೊಂದಿಗೆ ಅನುಷ್ಠಾನಗೊಳ್ಳುತ್ತಿದೆ.

ವಿಶ್ವ ಬ್ಯಾಂಕ್‌ನ 8ನೇ ನಿಯೋಗವು ಯೋಜನಾ ವ್ಯಾಪ್ತಿಯಲ್ಲಿ ಬರುವ ಹಲವಾರು ಪ್ರದೇಶಗಳಲ್ಲಿ ಕ್ಷೇತ್ರ ಭೇಟಿ ನಡೆಸಲು ಹಾಗೂ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನ ಪ್ರಗತಿ ಪರಾಮರ್ಶೆ ನಡೆಸಲು 2011ರ ಆಗಸ್ಟ್ ಮಾಹೆಯಲ್ಲಿ ರಾಜ್ಯಕ್ಕೆ ಭೇಟಿ ನೀಡಿತ್ತು. ಈ ಸಂದರ್ಭದಲ್ಲಿ, ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಿಸಿರುವ ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನ ಪೂರಕ ದಾಖಲಾತಿಗಳನ್ನು ಹಾಗೂ ಕಾಮಗಾರಿಗಳನ್ನು ವೀಕ್ಷಿಸಿ ಈವರೆಗೆ ಕಾಯ್ದುಕೊಂಡಿರುವ ಪಾರದರ್ಶಕತೆ ಹಾಗೂ ಗುಣಮಟ್ಟದ ಬಗ್ಗೆ ಬಹುವಾಗಿ ಮೆಚ್ಚಿಕೊಂಡಿದೆ. ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಸಂಗ್ರಹಣಾ ಪದ್ಧತಿಗಳನ್ನು ಸಹ ಪ್ರಶಂಸೆ ಮಾಡಿದೆ. ವಿಶ್ವ ಬ್ಯಾಂಕ್‌ನವರ ಈ ಮೆಚ್ಚುಗೆಯು ಗ್ರಾಮ ಸ್ವರಾಜ್ ಯೋಜನೆಯ ಉದ್ದೇಶಗಳು ಸಫಲಗೊಂಡಿರುವುದರ ದ್ಯೋತಕ.

ಐದು ವರ್ಷಗಳ ಅವಧಿಯಲ್ಲಿ ಗ್ರಾಮ ಸ್ವರಾಜ್ ಯೋಜನೆಯಡಿ ಸಾಧಿಸಿರುವ ಪ್ರಗತಿಯು ಗುರುತಿಸಬಹುದಾದ್ದಾಗಿದ್ದು ಕರ್ನಾಟಕ ರಾಜ್ಯಕ್ಕೆ ಅದರಲ್ಲೂ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಅಲ್ಲಿದ್ದ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವಲ್ಲಿ ತುಂಬಾ ಪ್ರಯೋಜನಕಾರಿಯಾಗಿದೆ. ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಂಡ ತಾಲ್ಲೂಕುಗಳಲ್ಲಿನ ಗ್ರಾಮ ಪಂಚಾಯತಿಗಳಲ್ಲಿ ಸಾರ್ವಜನಿಕರ ಸಹಭಾಗಿತ್ವ ಉತ್ತಮಗೊಂಡಿದೆ, ಸ್ವಂತ ಸಂಪನ್ಮೂಲಗಳ ಸಂಗ್ರಹಣೆಯಲ್ಲಿ ವ್ಯಾಪಕ ಸುಧಾರಣೆ ಕಂಡಿದೆ, ಪಂಚಾಯತಿಗಳು ನೀಡುತ್ತಿರುವ ಸೇವೆಗಳ ಬಗ್ಗೆ ಜನರು ಜಾಗೃತರಾಗಿದ್ದಾರೆ, ಪರಿಸರ ನಿರ್ವಹಣಾ ಚೌಕಟ್ಟು ಮತ್ತು ಸಂಗ್ರಹಣಾ ಪದ್ಧತಿಗಳು ನಿಜಕ್ಕೂ ಮಾದರಿಯಾಗಿವೆ. ಈ ಎಲ್ಲ ಉತ್ತಮ ಅಂಶಗಳು ಗ್ರಾಮ ಸ್ವರಾಜ್‌ನ ಫಲ ಎಂದೇ ಉಲ್ಲೇಖಿಸಬಹುದು. ಈ ಯೋಜನೆಯ ಅನುಷ್ಠಾನದಲ್ಲಿ ಕಂಡ ಉತ್ತಮ ಪ್ರಯೋಗಗಳನ್ನು ಹಾಗೂ ಯಶೋಗಾಥೆಗಳನ್ನು ರಾಜ್ಯದ ಇತರೆ ಗ್ರಾಮ ಪಂಚಾಯತಿಗಳಲ್ಲಿಯೂ ಸಹ ಅಳವಡಿಸಿಕೊಳ್ಳಲು ವಿಶ್ವ ಬ್ಯಾಂಕ್‌ನವರು ಸಲಹೆ ಮಾಡಿರುವುದು ಈ ಸಂದರ್ಭದಲ್ಲಿ ಹೇಳಲೇಬೇಕಾದ ಸಂಗತಿಯಾಗಿದೆ.

ಇದಿಷ್ಟೇ ಅಲ್ಲದೇ, ಗ್ರಾಮ ಸ್ವರಾಜ್ ಯೋಜನೆಯಡಿ ರಾಜ್ಯದ 175 ತಾಲ್ಲೂಕು ಕೇಂದ್ರಗಳಲ್ಲಿ ನಿರ್ಮಿಸಲಾಗಿರುವ / ನಿರ್ಮಿಸಲಾಗುತ್ತಿರುವ ಸಾಮರ್ಥ್ಯ ಸೌಧ ಕಟ್ಟಡಗಳು ಹಾಗೂ ರಾಜ್ಯದ ಐದು ಕಡೆಗಳಲ್ಲಿ ಸ್ಥಾಪಿಸಲಾಗುತ್ತಿರುವ ಸ್ಯಾಟ್‌ಕಾಂ – ಉಪಗ್ರಹ ಆಧಾರಿತ ತರಬೇತಿ ಕೇಂದ್ರಗಳು ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಯ ಭಾಗೀದಾರರ ಸಾಮರ್ಥ್ಯಾಭಿವೃದ್ಧಿ ಉಂಟು ಮಾಡುವ ನಿಟ್ಟಿನಲ್ಲಿ ಕೈಗೊಂಡ ಉತ್ತಮ ಕ್ರಮಗಳಾಗಿವೆ.

ಗ್ರಾಮ ಸ್ವರಾಜ್ ಯೋಜನೆಯಡಿ ಪ್ರಸಕ್ತ 2011–12ನೇ ಆರ್ಥಿಕ ಸಾಲಿನಲ್ಲಿ ವಿವಿಧ ಉದ್ದೇಶಗಳಿಗಾಗಿ ವಿನಿಯೋಗಿಸಬೇಕಾದ ಅನುದಾನ ರೂ. 65 ಕೋಟಿಗಳು ಬಾಕಿ ಇದ್ದು ಅನುಷ್ಠಾನ ಅವಧಿ ಏಳು ತಿಂಗಳುಗಳು ಮಾತ್ರ ಉಳಿದಿದೆ. ಈ ಅವಧಿಯಲ್ಲಿ ಸಮರೋಪಾದಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಿರ್ದಿಷ್ಟಪಡಿಸಿದ ಕಾರ್ಯಸೂಚಿಯ ಪ್ರಕಾರ ನಮ್ಮ ಅಧಿಕಾರಿ ಸಿಬ್ಬಂದಿಗಳೆಲ್ಲರೂ ಮತ್ತಷ್ಟು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿ ಯೋಜನೆಯ ಸಂಪೂರ್ಣ ಯಶಸ್ಸಿಗೆ ಭಾಜನರಾಗುತ್ತೀರೆಂದು ನಂಬಿದ್ದೇನೆ.

ಎಲ್ಲರಿಗೂ ದಸರಾ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು.

(ಡಾ. ಅಮಿತಾ ಪ್ರಸಾದ್)

ಪರಿಚಯ



**ಡಾ. ಶಾಲಿನಿ ರಜನೀಶ್**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿ**

ಕಾರ್ಯದರ್ಶಿಗಳಾಗಿ ಅಧಿಕಾರ ಚುಕ್ಕಾಣಿಯನ್ನು ಹಿಡಿದಿರುವ ಡಾ. ಶಾಲಿನಿ ರಜನೀಶ್ ಇವರ ಅಧಿಕಾರಾವಧಿಯಲ್ಲಿ ಎಲ್ಲವೂ ಶುಭವಾಗಲಿ ಎಂದು 'ಕರ್ನಾಟಕ ವಿಕಾಸ' ಪತ್ರಿಕಾ ಬಳಗ ಶುಭ ಹಾರೈಸುತ್ತದೆ.

# ಡಾ. ಶಾಲಿನಿ ರಜನೀಶ್

ಡಾ. ಶಾಲಿನಿ ರಜನೀಶ್ ಅವರು ಭಾರತೀಯ ಆಡಳಿತ ಸೇವೆಗೆ ಸೇರಿದ ಹಿರಿಯ ಅಧಿಕಾರಿಗಳು. ಪ್ರಸ್ತುತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೂ ಪ್ರತಿಭಾವಂತರಾದ ಡಾ. ಶಾಲಿನಿ ರಜನೀಶ್ ಅವರು ಪಂಜಾಬ್ ವಿಶ್ವ ವಿದ್ಯಾಲಯ ಚಂಡಿಗಡದಲ್ಲಿ ಮನೋವಿಜ್ಞಾನಶಾಸ್ತ್ರದ ಸ್ನಾತಕೋತ್ತರ ಪದವಿ, ಮಂಗಳೂರು ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿ ಹಾಗೂ ಆಸ್ಟ್ರೇಲಿಯಾದ ಲ್ಯಾಟ್ರೋಜ್ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ. ಪದವಿಯನ್ನು ಪಡೆದಿದ್ದಾರೆ.

ಬಿ.ಎ. ಮತ್ತು ಎಂ.ಎ. ಪದವಿಯಲ್ಲಿ ಚಿನ್ನದ ಪದಕಗಳಿಸಿದ ಹೆಗ್ಗಳಿಕೆ ಇವರದು. 1989ರ ಬ್ಯಾಚಿನ ಭಾರತೀಯ ಆಡಳಿತ ಸೇವಾ ಪರೀಕ್ಷೆಯಲ್ಲಿ ಮಹಿಳಾ ಅಗ್ರಸ್ಥಾನ ಪಡೆದ ಪ್ರತಿಭಾವಂತರು. ಸಣ್ಣ ಉಳಿತಾಯಗಳ ಶೇಖರಣೆಯಲ್ಲಿ ಅದ್ವಿತೀಯ ಸಾಧನೆಗಾಗಿ ರಾಜ್ಯ ಸರ್ಕಾರದ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳ ಸಹಾಯಕ ಸಚಿವರುಗಳ ಆಪ್ತಕಾರ್ಯದರ್ಶಿಗಳಾಗಿ, ಧಾರವಾಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಮತ್ತು ಜಿಲ್ಲಾಧಿಕಾರಿ ಮಹಾನಗರ ಪಾಲಿಕೆ, ಬೆಂಗಳೂರು ಮತ್ತು ಬೆಳಗಾವಿ ಜಿಲ್ಲಾಧಿಕಾರಿಯಾಗಿ, ಸರ್ಕಾರದ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಗುಲ್ಬರ್ಗಾ ಕಾರ್ಯದರ್ಶಿ ಹುದ್ದೆಯೂ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ಆಯಾ ಹುದ್ದೆಗಳಿಗೆ ಘನತೆ ಗೌರವಗಳು ಬರುವಂತಹ ಕ್ರಿಯಾಶೀಲ ಹಾಗೂ ಸ್ಪಂದನಶೀಲ ಆಡಳಿತವನ್ನು ನೀಡಿದ್ದಾರೆ.

ಡಾ. ಶಾಲಿನಿ ರಜನೀಶ್ ಅವರು ಸೃಜನಶೀಲ ಲೇಖಕರೂ ಹೌದು. 'ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಮೂಲಕ ಗ್ರಾಮೀಣಾಭಿವೃದ್ಧಿ, ಮ್ಯಾನೇಜ್‌ಮೆಂಟ್ ಟೆಕ್ನಿಕ್ಸ್, ಪಬ್ಲಿಕ್ ಪರ್ಸನಲ್ ಅಡ್ಮಿನಿಸ್ಟ್ರೇಷನ್, ಲೈಂಗಿಕ ಜಾಗತೀಕರಣ ಮತ್ತು ಹೆಚ್.ಐ.ವಿ. ಬಗ್ಗೆ ತರಬೇತಿ 'ಕಿರು ಪುಸ್ತಕ', 'ನಡೆ ಮುಂದೆ', 'ಮಹಿಳಾ ಸಬಲೀಕರಣಕ್ಕೆ ದಾರಿ' ಮುಂತಾದ ಮೌಲಿಕ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ.

ಜನಪ್ರಿಯ ಅಂಕಣಕಾರರಾಗಿರುವ ಡಾ. ಶಾಲಿನಿ ರಜನೀಶ್ ಅವರು ವಿಜಯ ಕರ್ನಾಟಕ ದಿನ ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ ವಿವಿಧ ವಿಷಯಗಳನ್ನು ಕುರಿತ ಅಂಕಣಗಳು ಓದುಗರ ಮನಸ್ಸನ್ನು ಸೂರೆಗೊಂಡಿವೆ. ಅಲ್ಲದೆ ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ ವತಿಯಿಂದ ಪ್ರಕಟವಾಗುತ್ತಿರುವ ಮಾಸಪತ್ರಿಕೆ, ಏಷಿಯಾದ ಉತ್ಪಾದನಾ ಸಂಸ್ಥೆ. ಜಪಾನ್ ಮ್ಯಾನೇಜ್‌ಮೆಂಟ್ ಇನ್ ಗವರ್ನಮೆಂಟ್ ಜರ್ನಲ್ ಪತ್ರಿಕೆಗಳಲ್ಲಿ ಇವರ ಮೌಲಿಕ ಲೇಖನಗಳು ಪ್ರಕಟವಾಗಿವೆ. ಗುಲ್ಬರ್ಗಾ ಆಕಾಶವಾಣಿ ನಿಲಯದಿಂದ ಇವರ ಅನೇಕ ಕಾರ್ಯಕ್ರಮಗಳು ಬಿತ್ತರಗೊಂಡಿವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೂತನ ಕಾರ್ಯದರ್ಶಿಗಳಾಗಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಡಾ. ಶಾಲಿನಿ ರಜನೀಶ್ ಅವರಿಗೆ 'ಕರ್ನಾಟಕ ವಿಕಾಸ' ಪತ್ರಿಕಾ ಬಳಗ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

❑

ಕಾವ್ಯ ವಿಕಾಸ



ಇನಾಯತ್ ಪಾಷ. ಎಸ್, *

ಮೊಬೈಲ್ : 9845022741

# ನೋಡುತಿರಲು

ನೋಡುತಿರಲು ನಾನು ಈ ಜಗವ ದಿನದಿಂದ ದಿನಕ್ಕೆ
ಸಾಗುತಿರಲು ಜನ ಸಂಖ್ಯೆ ಮುಗಿಲೆತ್ತರಕೆ.
ತಿನ್ನಲು ಇಲ್ಲದ ಆಹಾರ
ಎಲ್ಲಿ ನೋಡಿದರೂ ಆಹಾಕಾರ.

ದೇಶಗಳ ಮಧ್ಯೆ ಸಾಗುತಿಹವು ಯುದ್ಧಗಳು
ಬಲಿಯಾಗುತಿವೆ ಮುಗ್ಧ ಜೀವಿಗಳು.
ಎಲ್ಲಿ ನೋಡಿದರಲ್ಲಿ ಅರಾಜಕತೆ
ಕೇಳ ಬೇಡ ನೀ ನ್ಯಾಯದ ಕಥೆ.
ಮುಳುಗಿದೆ ಸಾಲದಿ ಭಾರತವು
ಇನ್ನು ಆಗಬೇಕಿದೆ ಜನ ಜಾಗೃತವು.

ನೋಡುತಿರಲು ನಾನು ಈ ಜಗವ ದಿನದಿಂದ ದಿನಕ್ಕೆ
ಸಾಗುತಿರಲು ಜನ ಸಂಖ್ಯೆ ಮುಗಿಲೆತ್ತರಕೆ.
ಎಲ್ಲಿ ನೋಡಿದರಲ್ಲಿ ಭ್ರಷ್ಟಾಚಾರ
ಕಲಿಯೋದು ಯಾವಾಗ ಜನ ಶಿಷ್ಟಾಚಾರ.

❑

* ಕಾರ್ಯನಿರ್ವಾಹಕ ಸಹಾಯಕ, ಗ್ರಾಮ ಸ್ವರಾಜ್ ಯೋಜನೆ, ಕೇಂದ್ರ ಕಛೇರಿ, ಬೆಂಗಳೂರು.

ಮುಖಮುಟ ವರದಿ

# ಮೈಸೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಮಹಿಳಾ ಸದಸ್ಯರ ಸಬಲೀಕರಣ ಯೋಜನೆ

ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಮಹಿಳಾ ಸದಸ್ಯರನ್ನು ಸಬಲೀಕರಣಗೊಳಿಸುವ ಹಿನ್ನೆಲೆಯಲ್ಲಿ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿಶ್ವಸಂಸ್ಥೆಯ ಮಹಿಳಾ ಘಟಕದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಒಂದು ಸಂಕ್ಷಿಪ್ತ ವರದಿ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೆಪ್ಟೆಂಬರ್ 14 ರಂದು ವಿಧಾನ ಸೌಧದಲ್ಲಿ ಏರ್ಪಡಿದ್ದ ಸಮಾರಂಭದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಮಹಿಳಾ ಸದಸ್ಯರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿಶ್ವಸಂಸ್ಥೆಯ ಮಹಿಳಾ ಘಟಕದೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಪ್ರಾಯೋಗಿಕವಾಗಿ ಮೈಸೂರು ಮತ್ತು ಧಾರವಾಡ ಜಿಲ್ಲೆಯಲ್ಲಿ ಈ ಯೋಜನೆ ಜಾರಿಗೆ ಬಂದಿದೆ.

ದಕ್ಷಿಣ ಏಷ್ಯಾ ಮತ್ತು ಭಾರತದಲ್ಲಿ ಮಹಿಳೆಯರ ರಾಜಕೀಯ ನಾಯಕತ್ವ ಮತ್ತು ಉತ್ತಮ ಆಡಳಿತಕ್ಕೆ ಉತ್ತೇಜನ ನೀಡುವ ಯೋಜನೆಯಡಿ ಈ ಕಾರ್ಯಕ್ರಮ ರೂಪಿಸಲಾಗಿದ್ದು, ರಾಜ್ಯದ ಎರಡು ಜಿಲ್ಲೆಗಳಲ್ಲಿ ಇದನ್ನು ಜಾರಿಗೊಳಿಸುವ ಸಂಬಂಧ ಇಲ್ಲಿ ನಡೆದ ಸಮಾರಂಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ಅಮಿತಾ ಪ್ರಸಾದ್ ಮತ್ತು ವಿಶ್ವಸಂಸ್ಥೆಯ ಮಹಿಳಾ ಘಟಕದ ಪ್ರಾದೇಶಿಕ ಕಾರ್ಯಕ್ರಮ ನಿರ್ದೇಶಕಿ ಸುಷ್ಮಾ ಕಪೂರ್ ಅವರು ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದರು.



## ಗಣ್ಯರಿಗೆ ಹೂವಿನ ಹಾರ ಬದಲು ಪುಸ್ತಕ ....

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯಲ್ಲಿ ಬರುವ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳು ಹಮ್ಮಿಕೊಳ್ಳುವ ಸಭೆ ಸಮಾರಂಭಗಳಲ್ಲಿ ಇನ್ನು ಮುಂದೆ ಗಣ್ಯರಿಗೆ ಹೂವಿನ ಹಾರ, ಹೂಗುಚ್ಛ ನೀಡಿ ಸ್ವಾಗತಿಸುವುದನ್ನು ಬಿಟ್ಟು ಪುಸ್ತಕ ಅಥವಾ ಸೌರ ದೀಪಗಳನ್ನು ನೀಡಿ ಗೌರವಿಸುವಂತೆ ಸುತ್ತೋಲೆ ಹೊರಡಿಲಾಗಿದೆ.

ಈ ಬಗ್ಗೆ ಅಧಿಕೃತ ಆದೇಶ ಹೊರಡಿಸಲಾಗಿದ್ದು, ನಾಡಿನ ಕಲೆ, ಸಂಸ್ಕೃತಿ, ವ್ಯಕ್ತಿತ್ವ ವಿಕಾಸ, ಗ್ರಾಮೀಣ ಜನ ಜೀವನಕ್ಕೆ ಸಂಬಂಧಿಸಿದ, ವಿವಾದಕ್ಕೆ ಎಡೆಮಾಡಿಕೊಡದ ಕನ್ನಡ ಪುಸ್ತಕಗಳು ಅಥವಾ ಸೌರ ದೀಪಗಳನ್ನು ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಗಣ್ಯರು/ಅತಿ ಗಣ್ಯರಿಗೆ ನೀಡುವಂತೆ ಸೂಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಜಗದೀಶ ಶೆಟ್ಟರ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಪುಸ್ತಕಗಳ ಪಟ್ಟಿಯನ್ನು ಪಡೆದುಕೊಂಡು ಸ್ಥಳೀಯ ಸಂಸ್ಥೆಗಳಿಗೆ ಕಳುಹಿಸಿಕೊಡಬೇಕು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಸುಷ್ಮಾ ಕಪೂರ್ ಬಾಂಗ್ಲಾದೇಶ, ಭೂತಾನ್, ನೇಪಾಳ, ಪಾಕಿಸ್ತಾನದಲ್ಲಿ ಸಬಲೀಕರಣ ಯೋಜನೆ ಜಾರಿಯಲ್ಲಿದೆ. ಅಲ್ಲದೆ ಭಾರತದ ಬಿಹಾರ, ಓಡಿಶಾ, ರಾಜಸ್ತಾನ, ಮಧ್ಯಪ್ರದೇಶ, ಆಂಧ್ರಪ್ರದೇಶ, ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ಮಹಿಳೆಯರಲ್ಲಿ ನಾಯಕತ್ವದ ಗುಣ ಬೆಳೆಸಲು, ಲಿಂಗ ತಾರತಮ್ಯ ಹೋಗಲಾಡಿಸಲು ಇದು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಜಗದೀಶ ಶೆಟ್ಟರ ಮಾತನಾಡಿ ಪ್ರಾಯೋಗಿಕವಾಗಿ ಎರಡು ಜಿಲ್ಲೆಗಳಲ್ಲಿ ಜಾರಿಗೊಳಿಸುತ್ತಿರುವ ಈ ಯೋಜನೆ ಯಶಸ್ವಿಯಾದರೆ ಉಳಿದ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು. ಮಹಿಳಾ ಸದಸ್ಯರಲ್ಲಿ ನಾಯಕತ್ವ ಗುಣ ಬೆಳೆಸಲು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ನಿರ್ಧಾರ ತೆಗೆದುಕೊಳ್ಳಲು ಈ ಯೋಜನೆ ನೆರವಾಗಲಿದೆ ಎಂದು ಹೇಳಿದರು.

ಗುಲ್ಬರ್ಗಾ ಜಿಲ್ಲಾ ಪಂಚಾಯತಿಯಲ್ಲಿ ಮಹಿಳಾ ಸದಸ್ಯರು, ತಮ್ಮ ಗಂಡಂದಿರಿಗೂ ಸಭೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು ಎಂದು ಗಲಾಟೆ ಮಾಡಿದ ಪ್ರಸಂಗ ಬೆಳಕಿಗೆ ಬಂದ ನಂತರ ನೋಟಿಸ್ ನೀಡಿ ಜಿಲ್ಲಾ ಪಂಚಾಯತಿಯನ್ನು ಅಮಾನತುಗೊಳಿಸುವ ಎಚ್ಚರಿಕೆ ನೀಡಲಾಗಿತ್ತು. ಇದಾದ ನಂತರ ಎಲ್ಲಿಯೂ ಇಂತಹ ಪ್ರಕರಣಗಳು ನಡೆದಿಲ್ಲ ಎಂದರು.

ಮೈಸೂರಿನ ಅಬ್ದುಲ್ ನಜೀರ್‌ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ ತರಬೇತಿ ನೀಡಲಿದ್ದು 2012ರ ಮಾರ್ಚ್‌ವರೆಗೂ ಈ ಯೋಜನೆ ಜಾರಿಯಲ್ಲಿರುತ್ತದೆ. ಅಗತ್ಯಬಿದ್ದರೆ ವಿಸ್ತರಿಸಲು ಅವಕಾಶವಿದೆ. ಯೋಜನೆಗೆ 1.35 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತದೆ. ಜಮಾಬಂದಿ, ಸಾಮಾಜಿಕ ಲೆಕ್ಕಪರಿಶೋಧನೆ, ಅಭಿವೃದ್ಧಿ ಯೋಜನೆಗಳ ರೂಪುರೇಷಗಳನ್ನು ಸಿದ್ಧಪಡಿಸುವುದು, ಮಾಸಿಕ ಸಭೆಗಳನ್ನು ನಡೆಸುವ ವಿಧಾನ, ಯೋಜನೆಯ ಸಮಿತಿಗಳು ಇತ್ಯಾದಿಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ. ❑

# ಗ್ರಾಮ ಸ್ವರಾಜ್ ಅನುಷ್ಠಾನ ಪೂರಕ ವಿಶ್ವ ಬ್ಯಾಂಕ್‌ನ 8ನೇ ನಿಯೋಗದ ರಾಜ್ಯ ಭೇಟಿ – ಆಗಸ್ಟ್ 2011




ಡಾ. ಎಂ.ಆರ್. ಏಕಾಂತಪ್ಪ *
ಮೊಬೈಲ್ : 9449440261


ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಸಮಗ್ರ ಪರಾಮರ್ಶೆಗಾಗಿ ಇತ್ತೀಚೆಗೆ ಭೇಟಿ ನೀಡಿದ್ದ ವಿಶ್ವ ಬ್ಯಾಂಕ್‌ನ ಎಂಟನೇ ನಿಯೋಗದ ರಾಜ್ಯ ಪ್ರವಾಸ ಚಿತ್ರಣ.

ಕರ್ನಾಟಕದಲ್ಲಿ ಅನುಷ್ಠಾನಗೊಳ್ಳುತ್ತಿರುವ ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಲು ಶ್ರೀಮತಿ ಯಾಂಗ್ಮಿ ಜೋ, ಟಾಸ್ಕ್ ಟೀಮ್ ಲೀಡರ್ ಇವರ ನೇತೃತ್ವದಲ್ಲಿ ಶ್ರೀ ಮೋಹನ್ ನಾಗರಾಜನ್, ಶ್ರೀ ಕೃಷ್ಣಮೂರ್ತಿ, ಶ್ರೀ ಬೇಸೆಲ್ ಮತ್ತು ಶ್ರೀ ನೀಲ್ ಬಡ್ಡಿ ಶಾ ಇವರನ್ನು ಸದಸ್ಯರನ್ನಾಗಿ ಒಳಗೊಂಡ ವಿಶ್ವ ಬ್ಯಾಂಕ್‌ನ 8ನೇ ನಿಯೋಗವು ದಿನಾಂಕ : 17 ರಿಂದ 22ನೇ ಆಗಸ್ಟ್, 2011 ಅವಧಿಯಲ್ಲಿ ರಾಜ್ಯಕ್ಕೆ ಭೇಟಿ ನೀಡಿತ್ತು.

ನಿಯೋಗವು ರಾಜ್ಯ ಭೇಟಿ ಅವಧಿಯಲ್ಲಿ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಎಲ್ಲಾ ಪ್ರಮುಖಾಂಶಗಳ ಕುರಿತು ಸಮಗ್ರವಾದ ಪರಾಮರ್ಶೆ ನಡೆಸಿತು. ದಿನಾಂಕ : 18ನೇ ಆಗಸ್ಟ್, 2011ರಂದು ದಾವಣಗೆರೆ ಜಿಲ್ಲೆಯ ಚನ್ನಗಿರಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿನ ಹಲವು ಗ್ರಾಮ ಪಂಚಾಯತಿಗಳಿಗೆ ಕ್ಷೇತ್ರ ಭೇಟಿ ನೀಡಿತು. ಈ ತಾಲ್ಲೂಕಿನ ಗ್ರಾಮ



ವಿಶ್ವ ಬ್ಯಾಂಕ್ ನಿಯೋಗದೊಂದಿಗೆ ಗ್ರಾಮ ಸ್ವರಾಜ್ ಯೋಜನೆಯ ಅಧಿಕಾರಿಗಳು


* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, 6ನೇ ಮಹಡಿ, ಎಂಎಸ್.ಐ.ಎಲ್. ಕಟ್ಟಡ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.



**ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ ಇವರೊಂದಿಗೆ ವಿಶ್ವ ಬ್ಯಾಂಕ್ ನಿಯೋಗದ ಸದಸ್ಯರು ಯೋಜನೆಯ ಕುರಿತು ಚರ್ಚಿಸುತ್ತಿರುವುದು.**

ಪಂಚಾಯತಿಗಳಲ್ಲಿ ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನಗೊಂಡ ಬಗೆಯನ್ನು ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಿಸಿರುವ ದಾಖಲಾತಿಗಳ ನೆರವಿನಿಂದ ಹಾಗೂ ಯೋಜನೆಯಡಿ ಅನುಷ್ಠಾನಗೊಳಿಸಲಾಗಿರುವ ಕಾಮಗಾರಿಗಳ ಸ್ಥಳ ಭೇಟಿ ಪರಿಶೀಲನೆಯಿಂದ ತಿಳಿದು ಕೊಂಡಿತು. ಕಾಮಗಾರಿಗಳ ಗುಣಮಟ್ಟ ಮತ್ತು ಯೋಜನೆಯಡಿ ಕಾಯ್ದುಕೊಂಡಿರುವ ಪಾರದರ್ಶಕತೆಯನ್ನು ಬಹುವಾಗಿ ಮೆಚ್ಚಿಕೊಂಡಿತು. ಯೋಜನೆಗೆ ಪೂರಕವಾಗಿ ಗ್ರಾಮ ಪಂಚಾಯತಿಗಳಲ್ಲಿ ಅಳವಡಿಸಿಕೊಂಡಿರುವ ಸಂಗ್ರಹಣಾ ಪದ್ಧತಿಗಳನ್ನು ಸಹ ಪ್ರಶಂಸೆ ಮಾಡಿದೆ.

ದಾವಣಗೆರೆ ಜಿಲ್ಲಾ ಪಂಚಾಯತಿ ಕಛೇರಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳೊಂದಿಗೆ ಗ್ರಾಮ ಸ್ವರಾಜ್ ಯೋಜನೆ ಸೇರಿದಂತೆ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಗೊಳಿಸುತ್ತಿರುವ ಇತರೆ ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಹಾಜರಿದ್ದ ಸದಸ್ಯರುಗಳು ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಬಗ್ಗೆ ತೃಪ್ತಿ ವ್ಯಕ್ತಪಡಿಸುತ್ತಾ ಯೋಜನೆಯನ್ನು ಇನ್ನೂ ಒಂದು ಅವಧಿಗೆ ವಿಸ್ತರಿಸುವಂತೆ ವಿಶ್ವ ಬ್ಯಾಂಕ್ ನಿಯೋಗಕ್ಕೆ ಮನವಿ ಮಾಡಿದರು. ಇದಾದ ನಂತರ ನಿಯೋಗವು ಜಿಲ್ಲಾ ಪಂಚಾಯತಿ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಸ್ಯಾಟ್‌ಕಾಂ – ಉಪಗ್ರಹ ಆಧಾರಿತ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಸಾಮರ್ಥ್ಯ ಸೌಧ ಕಟ್ಟಡದಲ್ಲಿ ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರಿಗೆ ಆಯೋಜಿಸಲಾಗಿದ್ದ ತರಬೇತಿ ಕಾರ್ಯಕ್ರಮಕ್ಕೆ ನಿಯೋಗವು ಅನಿರೀಕ್ಷಿತ ಭೇಟಿ ನೀಡಿ ಮಹಿಳಾ ಸದಸ್ಯರೊಂದಿಗೆ ತರಬೇತಿಯ ಪ್ರಯೋಜನಗಳ ಬಗ್ಗೆ ಚರ್ಚಿಸಿ ಮಾಹಿತಿ ಪಡೆದುಕೊಳ್ಳುವುದರ ಮೂಲಕ ಸಾಮರ್ಥ್ಯ ಸೌಧಗಳ ನಿರ್ಮಾಣ ಉದ್ದೇಶ ಸಫಲಗೊಳ್ಳುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿತು.

ದಿನಾಂಕ : 19.08.2011ರಂದು ಕೊಪ್ಪಳ ಜಿಲ್ಲೆಗೆ ತೆರಳಿದ ನಿಯೋಗವು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಇತರೆ ಅಧಿಕಾರಿಗಳೊಂದಿಗೆ ಯೋಜನಾ ಅನುಷ್ಠಾನ, ಅನುದಾನ ಬಿಡುಗಡೆ ಮತ್ತು ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಉಪಯೋಗದ ಬಗ್ಗೆ ಚರ್ಚಿಸಿತು. ನಂತರ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕಿನ ಕೆಲವು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಗ್ರಾಮ ಪಂಚಯತಿಗಳಲ್ಲಿ ನಿರ್ವಹಿಸಲಾಗುತ್ತಿರುವ ಪಂಚತಂತ್ರ ತಂತ್ರಾಂಶ, ಜೋಡಿ ನಮೂದು ಲೆಕ್ಕ ಪತ್ರ ಪದ್ಧತಿಯ ಅಳವಡಿಕೆ, ಸಂಗ್ರಹಣಾ ನಿಯಮಗಳ ಯಥಾವತ್ ಅನುಷ್ಠಾನ, ಸಾರ್ವಜನಿಕರಿಗೆ ಗ್ರಾಮ ಪಂಚಾಯತಿಗಳ ಮಾಹಿತಿಗಳನ್ನು ಪ್ರದರ್ಶಿಸುವ ಪ್ರಯೋಗಗಳು ಹಾಗೂ ಗ್ರಾಮ ಸ್ವರಾಜ್ ಯೋಜನೆಯಡಿ ಅನುಷ್ಠಾನ ಗೊಳಿಸಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲಿಸಿತು. ಈ ವಿಷಯಗಳ ಮೇಲೆ ಪಂಚಾಯತ್ ಸಂಸ್ಥೆಗಳು ವಹಿಸಿದ ಪಾತ್ರದ ಬಗ್ಗೆ ಸದಭಿಪ್ರಾಯ ವ್ಯಕ್ತಪಡಿಸಿತು.





ವಿಶ್ವ ಬ್ಯಾಂಕಿನ ನಿಯೋಗವು ದಾವಣಗೆರೆ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಚರ್ಚೆಯಲ್ಲಿ ತೊಡಗಿರುವುದು

ದಿನಾಂಕ : 20.08.2011ರಂದು ಬೆಂಗಳೂರಿಗೆ ಮರಳಿದ ನಿಯೋಗವು, ರಾಜ್ಯ ಮಟ್ಟದಲ್ಲಿ ಗ್ರಾಮ ಸ್ವರಾಜ್ ಯೋಜನೆಯ ವಿಷಯಗಳಿಗೆ ಪೂರಕವಾಗಿ ಹಲವು ಸುತ್ತಿನ ಸಂವಾದಗಳನ್ನು ನಡೆಸಿತು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಉಪಸ್ಥಿತಿಯಲ್ಲಿ ನಡೆದ ಸಂವಾದಗಳಲ್ಲಿ ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು, ನಿರ್ದೇಶಕರು, ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ಮುಖ್ಯಸ್ಥರು, ವಿಕೇಂದ್ರೀಕೃತ ವಿಶ್ಲೇಷಣಾ ಕೋಶ ಇವರುಗಳು ಪಾಲ್ಗೊಂಡಿದ್ದರು. ಈ ಸಂವಾದಕ್ಕೆ ರಾಜ್ಯದ ಆಯ್ದ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು, ಯೋಜನೆಯ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳನ್ನು, ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಗೂ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಆಹ್ವಾನಿಸಿದ್ದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ ಇವರು ಉಳಿದಿರುವ ಯೋಜನಾ ಅವಧಿಯಲ್ಲಿ ಯೋಜನೆಯ ಸಂಪೂರ್ಣ ಅನುಷ್ಠಾನಕ್ಕಾಗಿ ಕೈಗೊಳ್ಳಲಾಗುವ ಕ್ರಮಗಳ ಕುರಿತು ಸಿದ್ಧಪಡಿಸಲಾಗಿರುವ ಸಮಯ ನಿಗದಿ ಚೌಕಟ್ಟನ್ನು ಒಳಗೊಂಡ ಸವಿವರ ವರ್ಕ್ ಪ್ಲಾನ್‌ನ್ನು ಪ್ರಸ್ತುತಪಡಿಸಿದರು. ಪ್ರಸ್ತುತ ಆರ್ಥಿಕ ಸಾಲಿನಲ್ಲಿ ಬಾಕಿ ಉಳಿದಿರುವ ಏಳು ತಿಂಗಳುಗಳು ಮಾತ್ರ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನಕ್ಕೆ ದೊರಕಲಿದ್ದು ಈ ಅವಧಿಯಲ್ಲಿ ಯೋಜನೆಯಡಿ ಬಾಕಿ ಉಳಿದಿರುವ ಎಲ್ಲಾ ಅಂಶಗಳನ್ನು ಪೂರ್ಣಗೊಳಿಸಿ ನಿಗದಿಪಡಿಸಲಾದ ಗುರಿಗಳನ್ನು ಸಾಧಿಸುವುದರ ಮೂಲಕ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳುವ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ವಿಶ್ವ ಬ್ಯಾಂಕ್ ನಿಯೋಗವು ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನದಲ್ಲಿ ಗುರುತಿಸಿರುವ ಹಲವು ಉಪಯುಕ್ತ ಅಂಶಗಳಾದ ವಾರ್ಡ್ / ಗ್ರಾಮ ಸಭೆಗಳಲ್ಲಿ ಸಾರ್ವಜನಿಕರ ಸಹಭಾಗಿತ್ವ ಹಾಗೂ ಯೋಜನಾ ತಯಾರಿ, ಸಂಗ್ರಹಣಾ ಪದ್ಧತಿ, ಜೋಡಿ ನಮೂದು ಲೆಕ್ಕ ಪತ್ರ ಪದ್ಧತಿ, ಮಾಹಿತಿಗಳನ್ನು ಸಾರ್ವಜನಿಕರಿಗೆ ಬಹಿರಂಗಗೊಳಿಸುವುದು, ಪಂಚತಂತ್ರ ತಂತ್ರಾಂಶ, ಕಾಮಗಾರಿ ಅನುಷ್ಠಾನ ವಿಧಾನ ಹಾಗೂ ಪರಿಸರ ನಿರ್ವಹಣಾ ಚೌಕಟ್ಟು ಪದ್ಧತಿಗಳನ್ನು ರಾಜ್ಯದ ಇತರೆ ಗ್ರಾಮ ಪಂಚಾಯತಿಗಳಲ್ಲೂ ಸಹ ಅಳವಡಿಸಿಕೊಳ್ಳಲು ಸಲಹೆ ಮಾಡಿರುತ್ತದೆ.

ಇದಲ್ಲದೇ, ಗ್ರಾಮ ಪಂಚಾಯತಿಗಳಿಗೆ ಈಗಾಗಲೇ ನೀಡಲಾಗುತ್ತಿರುವ ಶಾಸನ ಬದ್ಧ ಅನುದಾನವು ಗ್ರಾಮ ಪಂಚಾಯತಿಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸಲು ಸಾಕಾಗುತ್ತಿಲ್ಲ. ಬದಲಾಗಿ ಶಾಸನ ಬದ್ಧ ಅನುದಾನದಲ್ಲಿ ವಿದ್ಯುತ್ ಬಿಲ್ಲುಗಳ ಪಾವತಿ ಮತ್ತು ಆಡಳಿತಾತ್ಮಕ ವೆಚ್ಚಗಳಿಗೆ ಬಳಕೆಯಾಗುತ್ತಿರುವುದರಿಂದ ಗ್ರಾಮ ಪಂಚಾಯತಿಗಳಿಗೆ ಈಗ ನೀಡಲಾಗುತ್ತಿರುವ ಅನುದಾನವನ್ನು ರಾಜ್ಯ ಮೂರನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ಹೆಚ್ಚಳ ಮಾಡಲು ಕ್ರಮವಹಿಸುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಿರುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಗ್ರಾಮ ಸ್ವರಾಜ್ ಯೋಜನಾ ಅನುಷ್ಠಾನವು ಸಮರ್ಪಕವಾದ ನಿಟ್ಟಿನಲ್ಲಿ ಸಾಗಿದೆ ಎಂಬ ವಿಶ್ವ ಬ್ಯಾಂಕ್‌ನ ನಿಯೋಗದ ಪ್ರಶಂಸೆಗೆ ಅನುಗುಣವಾಗಿ ಈ ಪ್ರಶಂಸೆ ಬರಲು ಕಾರಣರಾದ ಎಲ್ಲರ ಪಾತ್ರವು ಹಿರಿದಾದುದು ಎಂದು ತಿಳಿಸ ಬಯಸುತ್ತೇನೆ.

❑

# ಸುಸ್ಥಿರ ಅಭಿವೃದ್ಧಿಗೆ ದಾರಿದೀಪ

'ಗ್ರಾಮ ಸ್ವರಾಜ್' – ದೇಶದ ಗ್ರಾಮೀಣ ಜನರ ಬದುಕನ್ನು ಹಸನಗೊಳಿಸಲು ಗಾಂಧೀಜಿಯವರು ಕಂಡ ಕನಸು. ಜನರಿಂದಲೇ ನಡೆಸುವ ಗ್ರಾಮ ಸರ್ಕಾರಗಳು ಇರಬೇಕೆಂದು ಅವರು ಬಯಸಿದ್ದರು. ದೇಶದ ಪ್ರತಿಯೊಂದು ಗ್ರಾಮವು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಶಕ್ತಿ ಪಡೆಯಬೇಕು. ತಮ್ಮ ಬೇಕು ಬೇಡಗಳನ್ನು ಸ್ವಂತವಾಗಿ ಈಡೇರಿಸಿಕೊಂಡು ಸುಸ್ಥಿರ ಅಭಿವೃದ್ಧಿಯ ದಾರಿಯಲ್ಲಿ ಮುನ್ನಡೆಸಲು ಶಕ್ತಿಕೊಡುವಂತಹ ವ್ಯವಸ್ಥೆಯನ್ನು ತರುವ ಉದ್ದೇಶದೊಂದಿಗೆ ಗ್ರಾಮ ಸ್ವರಾಜ್ ಯೋಜನೆಯು ಸಂಡೂರು ತಾಲ್ಲೂಕಿನಲ್ಲಿ ಅನುಷ್ಠಾನ ಪ್ರಾರಂಭಿಸಿ ಬಹುಪಾಲು ಯಶ ಕಂಡಿರುವುದು ನಮ್ಮ ಕಣ್ಣ ಮುಂದಿದೆ.

ಬೇರೆ ಯೋಜನೆಗಳಂತೆ, ಗ್ರಾಮ ಪಂಚಾಯತಿಗಳಿಗೆ ಅನುದಾನವನ್ನು ನೀಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ನೆರವನ್ನು ನೀಡುವುದರಲ್ಲಿ ಮಾತ್ರ ಗ್ರಾಮ ಸ್ವರಾಜ್ ಆಸಕ್ತಿ ಹೊಂದಿಲ್ಲ. ಬದಲಾಗಿ ಗ್ರಾಮ ಪಂಚಾಯತಿಗಳ ಸಂಪೂರ್ಣ ಸಬಲೀಕರಣದ ಕಲ್ಪನೆಯನ್ನು ಹೊಂದಿರುವುದು ಮತ್ತು ಆ ಮೂಲಕ ನಮ್ಮ ತಾಲ್ಲೂಕನ್ನು ಅತ್ಯಂತ ಹಿಂದುಳಿದ ತಾಲ್ಲೂಕು ಎಂಬ ಹಣೆ ಪಟ್ಟಿಯಿಂದ ಹೊರತಾಗಿಸಿ ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವ ಧ್ಯೇಯದ ಫಲ ಸಂಡೂರು ತಾಲ್ಲೂಕಿಗೆ ವರದಾನವಾಗಿದೆ.

ಗ್ರಾಮ ಸ್ವರಾಜ್ ಯೋಜನೆಯಡಿ ಸಂಡೂರು ತಾಲ್ಲೂಕಿನ 21 ಗ್ರಾಮ ಪಂಚಾಯತಿಗಳಲ್ಲಿನ ಅಭಿವೃದ್ಧಿ ಚಿತ್ರಣ.



* ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಂಡೂರು.

ಸಂಡೂರು ತಾಲ್ಲೂಕಿನ 21 ಗ್ರಾಮ ಪಂಚಾಯತಿಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿವೆ. ಈ ಗ್ರಾಮ ಪಂಚಾಯತಿಗಳಿಗೆ ಯೋಜನೆಯಡಿ ನೀಡಲಾಗುವ ಮುಕ್ತ ಅನುದಾನವನ್ನು ಒಟ್ಟು ಜನಸಂಖ್ಯೆ, ವಿಸ್ತೀರ್ಣ, ಅನಕ್ಷರಸ್ಥರ ಜನಸಂಖ್ಯೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಸೂಚ್ಯಾಂಕಗಳಿಗನುಸಾರವಾಗಿ ನಿರ್ಧರಿಸುವುದು ಯೋಜನೆಯ ದೂರಾಲೋಚನೆಗೆ ಹಿಡಿದ ಕೈಗನ್ನಡಿ.

ಈ ಯೋಜನೆ ತಾಲ್ಲೂಕಿಗೆ ಬಂದಾಗಿನಿಂದ ಗ್ರಾಮ ಪಂಚಾಯತಿಗಳ ಸ್ವಂತ ಆದಾಯ ಸಂಗ್ರಹಣೆಯಲ್ಲಿ ಸಮಗ್ರ ಸುಧಾರಣೆಯಾಗಿದೆ. ಜೊತೆಗೆ ಗ್ರಾಮ ಪಂಚಾಯತಿಗಳು ನೀಡುವ ವಿವಿಧ ಪರಿಣಾಮಕಾರಿ ಸೇವೆಗಳಲ್ಲಿ ಜನರ ಆಧ್ಯತೆಗಳಿಗೆ ಮನ್ನಣೆ ನೀಡಲಾಗಿದೆ. ಅಲ್ಲದೇ ಗ್ರಾಮ ಪಂಚಾಯತಿ ಆಸ್ತಿ ನಿರ್ವಹಣೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕಲ್ಪಿಸಿಕೊಳ್ಳುವಲ್ಲಿ ಗ್ರಾಮ ಸ್ವರಾಜ್ ಮಾರ್ಗದರ್ಶಿಯಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ಅನ್ವಯ ಸಂಡೂರು ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳನ್ನು ಜೋಡಿ ನಮೂದು ಲೆಕ್ಕ ಪತ್ರ ಪದ್ಧತಿಯಲ್ಲಿ ಯಥಾವತ್ತಾಗಿ ಜಾರಿಗೆ ತರುವಲ್ಲಿ ಗ್ರಾಮ ಸ್ವರಾಜ್ ಯೋಜನಾ ಕಛೇರಿಯು ಪರಿಣಾಮಕಾರಿಯಾಗಿ ಉಸ್ತುವಾರಿ ಮಾಡಿರುವುದೇ ಕಾರಣ ಎಂದು ಹೇಳಬಹುದು. ಗುರುತಿಸಲೇಬೇಕಾದ ಮತ್ತೊಂದು ಪ್ರಮುಖ ವಿಷಯವೆಂದರೆ; ಪಂಚಾಯತ್ ರಾಜ್ ವ್ಯವಸ್ಥೆಯ ತಳಮಟ್ಟದಲ್ಲಿರುವ ಗ್ರಾಮ ಪಂಚಾಯತಿಗಳ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಶೀಘ್ರತೆಯನ್ನು ತಂದುಕೊಳ್ಳುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಿರುವ ಪಂಚತಂತ್ರ ಹೆಸರಿನ ಗಣಕ ತಂತ್ರಾಂಶ ನಿಜಕ್ಕೂ ಒಂದು ಮೈಲಿಗಲ್ಲು. ಪಂಚತಂತ್ರ ತಂತ್ರಾಂಶದ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಗ್ರಾಮ ಸ್ವರಾಜ್‌ನ ಪಾತ್ರ ಹಿರಿದಾದುದು.

ಗ್ರಾಮ ಸ್ವರಾಜ್ ಯೋಜನೆಯಡಿ ನಮ್ಮ ತಾಲ್ಲೂಕಿಗೆ ವರ್ಷವಾರು ಬಿಡುಗಡೆಗೊಳಿಸಿದ ಅನುದಾನದ ಸಂಕ್ಷಿಪ್ತ ಪರಿಚಯವನ್ನು ಈ ಕೆಳಗೆ ಮಾಡಲಾಗಿದೆ.

(1) 2006–07 – ರೂ. 131.33 ಲಕ್ಷಗಳು, (2) 2007–08 – ರೂ. 240.67 ಲಕ್ಷಗಳು, (3) 2008–09 – ರೂ. 239.43 ಲಕ್ಷಗಳು, (4) 2009–10 – ರೂ. 190.35 ಲಕ್ಷಗಳು, ಮತ್ತು (5) 2010–11 – ರೂ. 143.36 ಲಕ್ಷಗಳು. ಒಟ್ಟು ರೂ. 945.14 ಲಕ್ಷಗಳು. ಈ ಅನುದಾನದ ನೆರವಿನಿಂದ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತಹ ಹಾಗೂ ಗ್ರಾಮ ಪಂಚಾಯತಿಗಳ ಆದಾಯವನ್ನು ಹೆಚ್ಚಿಸುವಂತಹ ಆಸ್ತಿಗಳನ್ನು ಸೃಜಿಸಲಾಗಿದೆ. ತಾಲ್ಲೂಕಿನ ಬೊಮ್ಮಘಟ್ಟ, ತಾರಾನಗರ, ಭುಜಂಗನಗರ ಗ್ರಾಮ ಪಂಚಾಯತಿಗಳಲ್ಲಿ ಸುಸಜ್ಜಿತವಾದ ಗ್ರಾಮ ಪಂಚಾಯತಿ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು ನೋಡುಗರ ಕಣ್ಮನ ಸೆಳೆಯುತ್ತವೆ. ಕಾಮಗಾರಿಗಳ ಅನುಷ್ಠಾನದ ವೇಳೆ ಪರಿಸರದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿದುಕೊಂಡು ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವಲ್ಲಿ ಗ್ರಾಮ ಸ್ವರಾಜ್‌ನ ಪರಿಸರ ನಿರ್ವಹಣಾ ಮಾರ್ಗಸೂಚಿಗಳು ಮಾರ್ಗದರ್ಶಿಯಾಗಿವೆ.

ಗ್ರಾಮ ಪಂಚಾಯತಿಗಳನ್ನು ನಿಜವಾದ ಅರ್ಥದಲ್ಲಿ ಸಬಲೀಕರಣಗೊಂಡಿವೆ ಎನ್ನಬೇಕಾದರೆ ಅಲ್ಲಿರುವ ಮಾನವ ಸಂಪನ್ಮೂಲದ ಸಾಮರ್ಥ್ಯ ಉತ್ತಮವಾಗಿರಬೇಕೆಂಬುದು ದಿಟ. ಈ ನಿಟ್ಟಿನಲ್ಲಿ ಗ್ರಾಮ ಸ್ವರಾಜ್ ಉಪಯೋಗಕರ ಕೆಲಸ ಮಾಡಿದೆ. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸಹಯೋಗದಲ್ಲಿ ಪಂಚಾಯತಿಗಳ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚು ಹೆಚ್ಚು ಪುನಶ್ಚೇತನ ತರಬೇತಿಗಳನ್ನು ನೀಡಿ ಇವರೆಲ್ಲರುಗಳ ಸಾಮರ್ಥ್ಯ ವೃದ್ಧಿಗೆ ಕ್ರಮವಹಿಸಿರುವುದು ಪಂಚಾಯತ್ ರಾಜ್ ವ್ಯವಸ್ಥೆಯ ನಿಜವಾದ ಕಲ್ಪನೆಯನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಲು ಸಹಕಾರಿಯಾಗಿದೆ. ಇದಕ್ಕಾಗಿ ನಮ್ಮ ತಾಲ್ಲೂಕಿನಲ್ಲಿ ಗ್ರಾಮ ಸ್ವರಾಜ್ ಯೋಜನೆಯಡಿ ವ್ಯವಸ್ಥಿತವಾದ 'ಸಾಮರ್ಥ್ಯ ಸೌಧ' ಕಟ್ಟಡವನ್ನು ನಿರ್ಮಾಣ ಮಾಡಿರುವುದೇ ಒಂದು ಪುರಾವೆ. ಒಟ್ಟಾರೆಯಾಗಿ ಹೇಳುವುದಾದರೆ; ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ನಾವು ಎಲ್ಲಿದ್ದೇವೆ ಮತ್ತು ಎಲ್ಲಿಗೆ ಹೇಗೆ ಸಾಗಬೇಕು ಎಂಬುದರ ಚಿತ್ರಣವನ್ನು ಗ್ರಾಮ ಸ್ವರಾಜ್ ನಮಗೆ ಮಾಡಿಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ❑

# ಸಾಮರ್ಥ್ಯಾಭಿವೃದ್ಧಿಯ ಮಹಲು – ಸಾಮರ್ಥ್ಯ ಸೌಧ

– ಡಾ. ಕೆ.ವಿ. ದೇವರಾಜುಲು *

ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಹೊಸ ಹೊಸ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಯೋಜನೆಗಳ ಬಗ್ಗೆ ಅರಿವು ಮೂಡಿಸುವ ತರಬೇತಿ ನೀಡುವುದರ ಮೂಲಕ ಪರಿಚಯ ಮಾಡಿಕೊಡಲಾಗುತ್ತಿದೆ.

ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅಧಿಕಾರಿಗಳು ಹಾಗೂ ಅಧಿಕಾರೇತರರ ಪಾತ್ರ ಪ್ರಮುಖವಾದುದು. ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಹಲವಾರು ಹೊಸ ಹೊಸ ಯೋಜನೆಗಳು ಅನುಷ್ಠಾನಗೊಳ್ಳುತ್ತಿರುತ್ತವೆ. ಈ ವ್ಯವಸ್ಥೆಯಲ್ಲಿ ಭಾಗೀದಾರರಾದ ಪ್ರತಿಯೊಬ್ಬರು ವ್ಯವಸ್ಥೆಯ ಬಗ್ಗೆ ಹಾಗೂ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ/ಅರಿವು ಪಡೆದು ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸುವ ಹೊಣೆಗಾರಿಕೆ ಹೊಂದಿರುತ್ತಾರೆ. ಇಷ್ಟೇ ಅಲ್ಲದೇ ಸಾರ್ವಜನಿಕರ ಪಾತ್ರವು ಸಹ ಮಹತ್ವದ್ದಾಗಿರುತ್ತದೆ. ಇವರೆಲ್ಲರೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತಮ್ಮನ್ನು ತಾವು ಅರ್ಥಪೂರ್ಣ ರೀತಿಯಲ್ಲಿ ತೊಡಗಿಸಿಕೊಂಡು ವ್ಯವಸ್ಥೆಯ ಯಶಸ್ಸಿಗೆ ಶ್ರಮಿಸಬೇಕಾಗುತ್ತದೆ. ಹೊಸದಾಗಿ ಚುನಾಯಿತರಾಗುವ ಪ್ರತಿನಿಧಿಗಳಿಗೆ, ಸಾರ್ವಜನಿಕರಿಗೆ ಇಲಾಖೆಯ ವ್ಯವಸ್ಥೆ / ಕಾರ್ಯಕ್ರಮಗಳ ಬಗ್ಗೆ ಮಾಹಿತಿ/ಅರಿವು ಇಲ್ಲದೇ ಇರಬಹುದು. ಇವರುಗಳ ಸೇವೆಯನ್ನು ಇಲಾಖೆಯಲ್ಲಿ ಸಮರ್ಪಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಹಾಗೂ ಅವರ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವ ಬಗ್ಗೆ ಅವರುಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಅರಿವು ಮೂಡಿಸಬೇಕಾಗುತ್ತದೆ.




* ಪಂಚಾಯತಿ ಸೌಲಭ್ಯ ತಜ್ಞರು, ಗ್ರಾ.ಸ್ವಯೋ.,

ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಲು ದೊಡ್ಡದು. 30 ಜಿಲ್ಲಾ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು, 5628 ಗ್ರಾಮ ಪಂಚಾಯತಿಗಳು. ಈ ಎಲ್ಲಾ ಸಂಸ್ಥೆಗಳಿಂದ ಚುನಾಯಿತರಾಗುವ ಪ್ರತಿನಿಧಿಗಳ ಸಂಖ್ಯೆ ಸುಮಾರು ಒಂದು ಲಕ್ಷ ದಾಟಬಹುದು. ಇಷ್ಟೊಂದು ಅಗಾಧ ಸಂಖ್ಯೆಯ ಪ್ರತಿನಿಧಿಗಳಿಗೆ ಯಾವುದೋ ಒಂದು ಕಡೆ ತರಬೇತಿ ಅಥವಾ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ನಡೆಸಿ ಅವರುಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಕ್ರಮ ವಹಿಸುವುದು ಬಹಳ ತ್ರಾಸದಾಯಕ ಕಾರ್ಯವೆನಿಸುತ್ತದೆ. ಹಾಗೂ ಕ್ಷೇತ್ರ ಮಟ್ಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ಇತರೆ ಅಭಿವೃದ್ಧಿ ಇಲಾಖೆಗಳು ಸಹ ಸಕ್ರಿಯ ಪಾತ್ರವಹಿಸುತ್ತಿವೆ. ಒಟ್ಟಾರೆಯಾಗಿ ಹೇಳುವುದಾದರೆ ಆಡಳಿತ ವಿಕೇಂದ್ರೀಕರಣದಂತಹ ಬಹು ದೊಡ್ಡ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯು ಸಹ ಬಹು ದೊಡ್ಡದು.

ತಾಲ್ಲೂಕು ಪಂಚಾಯತಿಗಳಲ್ಲಿ ಈಗಾಗಲೇ ಲಭ್ಯವಿರುವ ಸಭಾಂಗಣಗಳಲ್ಲಿ ಸಾಮಾನ್ಯ ಸಭೆ, ಸ್ಥಾಯಿ ಸಮಿತಿ, ಕೆಡಿಪಿ ಹಾಗೂ ಇತರ ಪರಿಶೀಲನಾ ಸಭೆಗಳು, ಚುನಾವಣೆ ಪ್ರಕ್ರಿಯೆಗಳು ನಡೆಯುತ್ತಲಿರುತ್ತವೆ. ಹೊಸದಾಗಿ ಚುನಾಯಿತರಾದ ಪ್ರತಿನಿಧಿಗಳಿಗೆ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಪೂರಕವಾದ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮುಂತಾದ ಇತರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿ / ಸಿಬ್ಬಂದಿ ಹಾಗೂ ಫಲಾನುಭವಿಗಳಿಗೆ ಇಲಾಖಾ ಕಾರ್ಯಕ್ರಮಗಳ ತರಬೇತಿಯನ್ನು ನೀಡಲು ತಾಲ್ಲೂಕು ಪಂಚಾಯತಿ ಸಭಾಂಗಣಗಳಲ್ಲಿ ನಿರಂತರವಾಗಿ ತರಬೇತಿಯನ್ನು ನೀಡಲು ಸಾಧ್ಯವಾಗುವುದಿಲ್ಲ.

ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು ಹಾಗೂ ತಾಲ್ಲೂಕು ಪಂಚಾಯತಿಗಳ ಸಭೆಗಳನ್ನು ಆಯೋಜಿಸಲು ತಾಲ್ಲೂಕು ಪಂಚಾಯಿತಿ ಸಭಾಂಗಣವನ್ನು ಬಳಸಿಕೊಳ್ಳಲಾಗುತ್ತಿದ್ದು, ಇದರಿಂದ ಕೆಲವೊಮ್ಮೆ ತರಬೇತಿ ಕಾರ್ಯಕ್ರಮಗಳನ್ನು ಮುಂದುವರಿಸಲು ಕಷ್ಟವಾಗುತ್ತದೆ. ಕೆಲವು ತಾಲ್ಲೂಕು ಪಂಚಾಯತಿಗಳಲ್ಲಿ ಸಭಾಂಗಣಗಳು ಇಕ್ಕಟ್ಟಾಗಿದ್ದು ಮುಕ್ತ ಸ್ಥಳದ ಅಭಾವದಿಂದ ತರಬೇತಿ ನಡೆಸಲು ಸಮಸ್ಯೆಯಾಗುತ್ತಿದೆ. ಕೆಲವು ತಾಲ್ಲೂಕುಗಳಲ್ಲಿ ಸಭಾಂಗಣಗಳು ದಾಸ್ತಾನು ಕೊಠಡಿಗಳಾಗಿ ಸಹ ಬಳಕೆಯಾಗುತ್ತಿದ್ದು ಆಗಾಗ್ಗೆ ದಾಸ್ತಾನು ಬಳಕೆಗೆ ಸಿಬ್ಬಂದಿಗಳು ಓಡಾಡುತ್ತಿರುವ ಕಾರಣ ತರಬೇತಿಯ ಶಿಬಿರಾರ್ಥಿಗಳಿಗೆ ತರಬೇತಿಯಲ್ಲಿ ತೊಡಗಿಸಿಕೊಳ್ಳಲು ಕಷ್ಟವಾಗುತ್ತಿದೆ.

ಅಧಿಕಾರಿ ಮತ್ತು ಅಧಿಕಾರೇತರರಿಗೆ ಅವರ ಕೇಂದ್ರ ಕಾರ್ಯಸ್ಥಾನದಿಂದ ಹೊರತುಪಡಿಸಿದ ಮತ್ತೊಂದು ಸ್ಥಳದಲ್ಲಿ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ನಡೆಸಿದರೆ ಕ್ಷೇತ್ರ ಮಟ್ಟದಲ್ಲಿ ಅವರ ಅಲಭ್ಯತೆಯಿಂದಾಗಿ ಅಭಿವೃದ್ಧಿಯಲ್ಲಿ ಕುಂಠಿತವಾಗುವ ಸಾಧ್ಯತೆ ಇರುವುದನ್ನು ಮನಗಂಡು ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆ ಗಳನ್ನು ನಡೆಸಲು ಸುಸಜ್ಜಿತವಾದ ಕಟ್ಟಡವೊಂದರ ಅಭಾವ ಇರುವುದನ್ನು ಮನಗಂಡ ಸರ್ಕಾರ ಗ್ರಾಮ ಸ್ವರಾಜ್ ಯೋಜನೆಯಡಿ ರಾಜ್ಯದ 175 ತಾಲ್ಲೂಕು ಕೇಂದ್ರಗಳಲ್ಲಿ ಸುಸಜ್ಜಿತವಾದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳಿಗಾಗಿನ ಸಾಮರ್ಥ್ಯ ಸೌಧ ಹೆಸರಿನ ಕಟ್ಟಡವನ್ನು ನಿರ್ಮಾಣ ಮಾಡಲು ಕ್ರಮ ವಹಿಸಿರುವುದು ಹೆಮ್ಮೆಯ ವಿಚಾರವಾಗಿದೆ.

ಪಂಚಾಯತ್ ರಾಜ್ ಇಲಾಖೆಯಲ್ಲಿ ನಿರ್ಮಿಸಲಾಗುತ್ತಿರುವ ಸಾಮರ್ಥ್ಯ ಸೌಧ ಕಟ್ಟಡಗಳು ನಿಜಕ್ಕೂ ಹೆಮ್ಮೆಯ ಆಸ್ತಿಯೆನಿಸಿವೆ. ಅದರಲ್ಲೂ ಈ ಕಟ್ಟಡಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿಗಾಗಿ ದುಡಿಯುತ್ತಿರುವ ವಿಶ್ವ ಬ್ಯಾಂಕ್ ಆರ್ಥಿಕ ನೆರವಿನ ಗ್ರಾಮ ಸ್ವರಾಜ್ ಯೋಜನೆಯ ಅನುದಾನದ ನೆರವಿನಿಂದ ಅನುಷ್ಠಾನಗೊಳಿಸುತ್ತಿರುವುದು ಉಲ್ಲೇಖನೀಯವಾದುದು. ಕಟ್ಟಡಗಳ ನಿರ್ಮಾಣ ಪ್ರಗತಿಯನ್ನು ಅವಲೋಕಿಸಿದಲ್ಲಿ ಈಗಾಗಲೇ 90 ಕಟ್ಟಡಗಳು ಪೂರ್ಣಗೊಂಡು, 74 ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ದಿನಾಂಕ 20.08.2009ಕ್ಕೂ ಮೊದಲು ನಿರ್ಮಾಣ ಕಾರ್ಯ ಪ್ರಾರಂಭಿಸಿದ್ದ ಸಾಮರ್ಥ್ಯ ಸೌಧ ಕಟ್ಟಡಗಳಿಗೆ

ರೂ. 16 ಲಕ್ಷಗಳ ಆಂದಾಜು ಮೊತ್ತವನ್ನು ನಿಗದಿತ ವಿನ್ಯಾಸದಲ್ಲಿ ಹಾಗೂ ಈ ದಿನಾಂಕದವರೆಗೆ ನಿರ್ಮಾಣ ಕಾರ್ಯ ಪ್ರಾರಂಭಿಸದಿದ್ದ ಬಾಕಿ ಕಟ್ಟಡಗಳನ್ನು ಪರಿಷ್ಕೃತ ವಿನ್ಯಾಸದೊಂದಿಗೆ ರೂ. 25.00 ಲಕ್ಷಗಳ ಹೊಸ ಅಂದಾಜು ಮಿತಿಯಲ್ಲಿ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಪೂರ್ಣಗೊಂಡ ಪ್ರತಿ ಸಾಮರ್ಥ್ಯ ಸೌಧ ಕಟ್ಟಡದಲ್ಲಿ ತರಬೇತಿಗಳನ್ನು ನಡೆಸಲು ಅಗತ್ಯವಾಗಿ ಬೇಕಾಗಿರುವ ಪರಿಕರಗಳನ್ನು ಖರೀದಿಸಲು ಯೋಜನಾ ಕಛೇರಿಯಿಂದ ರೂ. 1,82,400–00ಗಳ ಅನುದಾನವನ್ನು ಸಹ ಬಿಡುಗಡೆ ಮಾಡಲಾಗುತ್ತಿದೆ. ಖರೀದಿಸಬೇಕಾದ ಪರಿಕರಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಪರಿಕರಗಳ ವಿವರ | ಪರಿಮಾಣ |
|---|---|---|
| 1 | LCD TV (TFT Moniter) 42" | 01 |
| 2 | DVD Player | 01 |
| 3 | Voltage stabilizer | 01 |
| 4 | Almera with locker 4.50'*2.75' | 01 |
| 5 | Solar UPS/Generator which provides 8 hours back up | 01 |
| 6 | Necessary Electrical wiring, earthing | as per requirement |
| 7 | Providing dark colour curtains to windows and doors to regulate light | as per requirement |
| 8 | Digital camera with audio and video and USB adopter | |
| 9 | For recording | 01 |
| 10 | Molded rubber cotton corp | 01 |
| 11 | Web camera | 01 |

Total cost including transportation, loading, unloading, installation, testing and commissioning charges at taluk level.

ಈ ಪರಿಕರಗಳನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿಗಳಿಗೆ ವಹಿಸಿಕೊಡಲಾಗಿದೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿಯನ್ನು ಸದಸ್ಯರನ್ನಾಗಿ ಹಾಗೂ ಮುಖ್ಯ ಲೆಕ್ಕಾಧಿಕಾರಿಯನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಒಳಗೊಂಡ ಸಾಮರ್ಥ್ಯ ಸೌಧ ಕೇಂದ್ರಗಳಿಗೆ ಪರಿಕರಗಳನ್ನು ಸಂಗ್ರಹಿಸುವ ಸಮಿತಿಯು ಪರಿಕರಗಳ ಸಂಗ್ರಹಣೆ ಕ್ರಮಕೈಗೊಳ್ಳಬೇಕಾಗಿದೆ.

ಸಾಮರ್ಥ್ಯ ಸೌಧಗಳು ನಿಜವಾದ ಅರ್ಥದಲ್ಲಿ ಸಮುದಾಯದ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸದ್ಬಳಕೆಯಾಗಲಿ ಎಂಬುದು ನಮ್ಮೆಲ್ಲರ ಆಶಯ.

❑

# ಕೂಡ್ಲಿಗಿ ತಾಲ್ಲೂಕು ಗ್ರಾಮೀಣ ಭಾಗದಲ್ಲಿ ಗ್ರಾಮ ಸ್ವರಾಜ್ ಯೋಜನೆಯಿಂದಾಗಿ ಉಂಟಾದ ಅಭಿವೃದ್ಧಿ ಬದುಕಿನ ಚಿತ್ರಣ

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದಿಂದ ಉಂಟಾದ ಅಭಿವೃದ್ಧಿ ಬದುಕಿನ ಚಿತ್ರಣ.

ಬಳ್ಳಾರಿ ಜಿಲ್ಲೆಯಲ್ಲಿ ಬರುವ ಕೂಡ್ಲಿಗಿ ತಾಲ್ಲೂಕು ಒಟ್ಟು 2,27,633 ಜನಸಂಖ್ಯೆಯನ್ನು ಒಳಗೊಂಡಿದೆ. ಇಲ್ಲಿ ಹೆಚ್ಚು ಆರ್ಥಿಕ ಪ್ರಗತಿಯನ್ನು ಕಾಣದ ಕುಟುಂಬಗಳು, ನಿರುದ್ಯೋಗಿ ಯುವಕ ಯುವತಿಯರು ಮತ್ತು ಪ್ರಮುಖವಾಗಿ ಮಳೆ ಆಶ್ರಿತ ಕೃಷಿಯನ್ನೇ ಅವಲಂಬಿಸಿ ಜೀವನ ನಡೆಸುವ ಬಹುತೇಕ ಕುಟುಂಬಗಳು ಇರುವುದನ್ನು ಮನಗಂಡು ಸರ್ಕಾರವು ಡಾ. ನಂಜುಂಡಪ್ಪರವರ ವರದಿಯನ್ನು ಆಧರಿಸಿ ಅತೀ ಹಿಂದುಳಿದ ತಾಲ್ಲೂಕೆಂದು ಘೋಷಿಸಿದೆ. ತಾಲ್ಲೂಕನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಗ್ರಾಮ ಸ್ವರಾಜ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ಕೂಡ್ಲಿಗಿ ತಾಲ್ಲೂಕಿನ ಜನತೆಯ ಪಾಲಿಗೆ ಒಲಿದು ಬಂದ ಅದೃಷ್ಟವೇ ಸರಿ. ಈ ಯೋಜನೆಯು ಗಾಂಧೀಜಿಯವರ ಗ್ರಾಮ ರಾಜ್ಯವು ರಾಮ ರಾಜ್ಯವಾಗಬೇಕೆನ್ನುವ ಕನಸಿನ ಮೇರೆಗೆ ಅನುಷ್ಠಾನಕ್ಕೆ ಬಂದ ಯೋಜನೆಯಾಗಿದೆ. ಗ್ರಾಮೀಣರ ಬದುಕನ್ನು ಸ್ವಾವಲಂಬಿಯಾಗಿಸಬೇಕೆಂಬುದು, ಒಂದು ಗ್ರಾಮಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಜನತೆ ತಾವೇ ಸ್ವಯಂ ಪೂರೈಸಿಕೊಳ್ಳುವ ಶಕ್ತಿ ಪಡೆಯಬೇಕು ಮತ್ತು ತಮ್ಮ ನಿರ್ಧಾರಗಳಲ್ಲಿ ಯಾವುದು ಬೇಕು ಯಾವುದು ಬೇಡ ಎನ್ನುವುದನ್ನು ಜನತೆ ಮುಕ್ತವಾಗಿ ನಿರ್ಧರಿಸಲು ಸಾಧ್ಯವಾಗಬೇಕೆಂಬುದು ಗಾಂಧೀಜಿಯವರ ಆಶಯ ವಾಗಿದ್ದು ಅದಕ್ಕೆ ಪೂರಕವಾಗಿ ಈ ಯೋಜನೆಯು ಅನುಷ್ಠಾನಗೊಳ್ಳುತ್ತಿದ್ದು ಸಾಕಷ್ಟು ಅಭಿವೃದ್ದಿಗೆ ಕಾರಣವಾಗಿರುವುದು ಗಾಂಧೀಜಿಯವರ ಕನಸನ್ನು ಸಫಲಗೊಳಿಸುವಲ್ಲಿ ಸರ್ಕಾರ ಕೈಗೊಂಡ ಮಹತ್ವ ಪೂರ್ಣ ಹೆಜ್ಜೆ ಎನ್ನಬಹುದು.



* ಸಮಸ್ತ ತಾಲ್ಲೂಕಿನ ಜನರ ಪರವಾಗಿ, ತಾಲ್ಲೂಕು ಪಂಚಾಯತಿ, ಕೂಡ್ಲಿಗಿ.

ಸಂವಿಧಾನದ 73ನೇ ತಿದ್ದುಪಡಿಯ ಮೇರೆಗೆ ಪಂಚಾಯತ್ ರಾಜ್ ವ್ಯವಸ್ಥೆಯಡಿ ಗ್ರಾಮ ಪಂಚಾಯತಿಗಳಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಗೆ ಹೆಚ್ಚಿನ ಮಹತ್ವ ನೀಡಿ ಅಧಿಕಾರಯುತ ಗೊಳಿಸಿರುವುದು ಜನರು ತಮ್ಮ ಬೇಡಿಕೆಗಳನ್ನು ಮಂಡಿಸಿ ಸವಲತ್ತುಗಳನ್ನು ಪಡೆಯಲು ಅವಕಾಶ ಸಿಕ್ಕಿದಂತಾಗಿದೆ. ವಿಶ್ವ ಬ್ಯಾಂಕ್ ಪ್ರಾಯೋಜಿತ ಗ್ರಾಮ ಸ್ವರಾಜ್ ಯೋಜನೆಯು ಕೂಡಾ ಈ ಪದ್ಧತಿಯಲ್ಲಿ ವಿಶ್ವಾಸವನ್ನು ಹೊಂದಿದ್ದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ.

ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ಕೂಡ್ಲಿಗಿ ತಾಲ್ಲೂಕಿಗೆ ಒದಗಿಸಲಾದ ಆರ್ಥಿಕ ನೆರವಿನ ಚಿತ್ರಣವನ್ನು ಮತ್ತು ಇದರ ನೆರವಿನಿಂದ ಕೈಗೊಳ್ಳಲಾದ ಕಾಮಗಾರಿಗಳ ಅಂಕಿ ಅಂಶಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ರೂ. ಲಕ್ಷಗಳಲ್ಲಿ

| ಆರ್ಥಿಕ ವರ್ಷ | ಆರ್ಥಿಕ ಪ್ರಗತಿ | | | ಭೌತಿಕ ಪ್ರಗತಿ | |
|---|---|---|---|---|---|
| | ಗುರಿ | ಬಿಡುಗಡೆ | ಸಾಧನೆ | ಗುರಿ | ಸಾಧನೆ |
| 2006-07 | 201.39 | 201.90 | 201.39 | 192 | 192 |
| 2007-08 | 278.53 | 278.53 | 278.53 | 241 | 241 |
| 2008-09 | 376.11 | 376.11 | 376.11 | 275 | 275 |
| 2009-10 | 300.88 | 292.78 | 270.48 | 292 | 259 |
| 2010-11 | 225.65 | 150.44 | 27.839 | 195 | 30 |

ಗ್ರಾಮ ಸ್ವರಾಜ್ ಯೋಜನೆಯ ಅಡಿಯಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೂ ಬಿಡುಗಡೆಯಾದ ಅನುದಾನದಲ್ಲಿ ಗ್ರಾಮ ಪಂಚಾಯತಿಗಳ ಮುಖಾಂತರ ಗ್ರಾಮಗಳಲ್ಲಿ ಸಿ.ಸಿ. ರಸ್ತೆಗಳು, ಚರಂಡಿ ನಿರ್ಮಾಣ, ಶಾಲಾ ಕಾಂಪೌಂಡುಗಳು, ಗ್ರಾಮ ಪಂಚಾಯಿತಿ ಕಟ್ಟಡಗಳು, ಬಸ್ ತುಂಗುದಾಣಗಳು ಸೇರಿದಂತೆ ಇತರೆ ಒಟ್ಟು 997 ವಿವಿಧ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಗ್ರಾಮಗಳಿಗೆ ಅಗತ್ಯವಿರುವ ಇನ್ನೂ ಹಲವಾರು ಕಾಮಗಾರಿಗಳನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಲಾಗಿದ್ದು ಗ್ರಾಮ ಸ್ವರಾಜ್ ಯೋಜನೆಯನ್ನು ಐದು ವರ್ಷಗಳ ನಂತರವೂ ಸಹ ಮುಂದುವರಿಸಿದಲ್ಲಿ ಪೂರ್ಣ ಪ್ರಮಾಣದಲ್ಲಿ ಗ್ರಾಮಗಳ ಪ್ರಗತಿ ಸಾಧಿಸಬಹುದಾಗಿದೆ.

ಗ್ರಾಮೀಣ ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳು ಸಶಕ್ತವಾಗಬೇಕು. ಗ್ರಾಮೀಣ ಜನರ ಅತೀ ಅಗತ್ಯಗಳಾದ ಕುಡಿಯುವ ನೀರು, ನೈರ್ಮಲ್ಯ, ಬೀದಿ ದೀಪಗಳನ್ನು ಗ್ರಾಮ ಸ್ವರಾಜ್ ಯೋಜನೆಯಿಂದ ಪಡೆಯುವಲ್ಲಿ ಕೂಡ್ಲಿಗಿ ತಾಲ್ಲೂಕಿನ ಜನತೆ ಯಶ ಕಂಡಿದ್ದಾರೆ ಎಂದರೆ ತಪ್ಪಾಗುವುದಿಲ್ಲ.

ಗ್ರಾಮದ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸ್ಥಳೀಯವಾಗಿ ಅಭಿವೃದ್ಧಿ ಸಾಧಿಸಬೇಕೆಂಬ ಗಾಂಧೀಜಿಯವರ ಅಭಿಲಾಷೆಗೆ ಗ್ರಾಮ ಸ್ವರಾಜ್ ಒತ್ತು ನೀಡಿದೆ. ಇದಕ್ಕೆ ಪೂರಕವಾಗಿ ಗ್ರಾಮ ಸ್ವರಾಜ್ ಯೋಜನೆಯ ಅನುದಾನವನ್ನು ಉಪಯೋಗಿಸಿಕೊಂಡು ಗ್ರಾಮ ಪಂಚಾಯತಿಗಳಿಗೆ ಶಾಶ್ವತ ಆದಾಯ ತರುವಂತಹ ಕಾಮಗಾರಿಗಳಾದ ವಾಣಿಜ್ಯ ಮಳಿಗೆಗಳ ನಿರ್ಮಾಣ ಇಲ್ಲಿ ಉಲ್ಲೇಖನೀಯವಾದುದು.

ಗ್ರಾಮ ಸ್ವರಾಜ್ ಯೋಜನೆಯ ಅನುದಾನದ ನೆರವಿನಿಂದ ಮಾಹಿತಿ, ಶಿಕ್ಷಣ ಮತ್ತು ಸಂವಹನದಡಿ; ಕರವಸೂಲಿಗಾರರಿಗೆ ಸೂಕ್ತ ತರಬೇತಿ ನೀಡುವ ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕರವಸೂಲಿಯನ್ನು ಹೆಚ್ಚಿಸಲು ಪ್ರೇರೇಪಿಸಲಾಗಿದೆ



ಅಷ್ಟೇ ಅಲ್ಲದೇ ಹಲವಾರು ಕಾರ್ಯಕ್ರಮಗಳ ಮೂಲಕ ಕರಗಳನ್ನು ಪಾವತಿಸಲು ಗ್ರಾಮಸ್ಥರಿಗೆ ತಿಳುವಳಿಕೆ ಮೂಡಿಸಲಾಗಿದೆ. ಗ್ರಾಮ ಮಟ್ಟದಲ್ಲಿ ಒದಗಿಸಲಾಗುತ್ತಿರುವ ಕೆಲವು ಸೇವೆಗಳಾದ ಗ್ರಾಮೀಣ ಕುಡಿಯುವ ನೀರು, ಪ್ರಾಥಮಿಕ ಶಿಕ್ಷಣ, ವಯಸ್ಕರ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಪಡಿತರ ವಿತರಣೆ ಇತ್ಯಾದಿಗಳ ಬಗ್ಗೆ ಗ್ರಾಮೀಣ ಜನತೆಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸುವಲ್ಲಿ ಗ್ರಾಮ ಸ್ವರಾಜ್ ಯೋಜನೆಯ ನೆರವು ಪಡೆಯಲಾಗಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು.

ಗ್ರಾಮ ಸ್ವರಾಜ್ ಯೋಜನೆಯ ಮತ್ತೊಂದು ಪ್ರಯೋಜನವೆಂದರೆ ಈ ಜನಪ್ರತಿನಿಧಿಗಳ ಸಾಮರ್ಥ್ಯವನ್ನು ಹೆಚ್ಚಿಸಿರುವುದು. ಅಲ್ಲದೇ ಪಂಚಾಯತಿಗಳನ್ನು ಗಣಕೀಕರಣ ಗೊಳಿಸಿ ಆಡಳಿತದಲ್ಲಿ ಪಾರದರ್ಶಕತೆ ತರುವಲ್ಲಿ ಗ್ರಾಮ ಸ್ವರಾಜ್‌ನ ಪಾತ್ರ ಹಿರಿದಾದುದು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರಂತೆ ಕೂಡ್ಲಿಗಿ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಜೋಡಿ ದಾಖಲೆ ಲೆಕ್ಕ ಪತ್ರ ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಿರುವುದು ಒಂದು ಸಾಧನೆಯಾಗಿದೆ. ಈ ಸಾಧನೆಯ ಹಿಂದೆ ಗ್ರಾಮ ಸ್ವರಾಜ್ ಒಂದು ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದೆ.

ಗ್ರಾಮ ಸ್ವರಾಜ್‌ನ ಮುಕ್ತ ಅನುದಾನದ ನೆರವಿನಿಂದ ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಅನುಷ್ಠಾನಗೊಳಿಸಿರುವ ಪ್ರತಿ ಕಾಮಗಾರಿಯು ಟೆಂಡರ್ ಮೂಲಕ ಅನುಷ್ಠಾನಗೊಳಿಸಿದ ಕಾಮಗಾರಿಗಳಾಗಿವೆ. ಟೆಂಡರ್ ಮೂಲಕ ಅನುಷ್ಠಾನಗೊಳಿಸಿದ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ. ಕಾಮಗಾರಿಗಳ ಅನುಷ್ಠಾನ ಶೀಘ್ರವಾಗಿ ಬಳಕೆಗೆ ಸನ್ನದ್ಧಗೊಳ್ಳುತ್ತಿವೆ. ಕಾಮಗಾರಿ ಸಂಬಂಧಿತ ಎಲ್ಲಾ ದಾಖಲಾತಿಗಳು ಸುಲಭವಾಗಿ ಮತ್ತು ಸಮರ್ಪಕವಾಗಿ ಲಭ್ಯವಾಗುತ್ತಿವೆ. ಕಾಮಗಾರಿ ಅನುಷ್ಠಾನದಲ್ಲಿನ ಈ ಪದ್ಧತಿ ಈ ಭಾಗದ ಗ್ರಾಮೀಣ ಜನತೆಗೆ ತೃಪ್ತಿಯನ್ನು ತಂದಿರುತ್ತದೆ. ಈ ಅಂಶಗಳು ಗ್ರಾಮ ಸ್ವರಾಜ್ ಯೋಜನೆಯಡಿ ಅಳವಡಿಸಿ ಕೊಳ್ಳಲಾದ ಉತ್ತಮ ಕಾರ್ಯಗಳಾಗಿವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಯೋಜನೆಯ ಅನುಷ್ಠಾನದ ಬಗ್ಗೆ ಚುನಾಯಿತ ಪ್ರತಿನಿಧಿಗಳಲ್ಲಿಯೂ ಸಹ ಒಳ್ಳೆಯ ಅಭಿಪ್ರಾಯ ವ್ಯಕ್ತವಾಗಿರುತ್ತದೆ.

ಗ್ರಾಮ ಸ್ವರಾಜ್ ಯೋಜನೆ ಬರುವ ಮುಂಚೆ ಹಳ್ಳಿಗಳು ಸ್ವಚ್ಚತೆಯಾಗದೇ ಜನರ ಜೀವನ ಸ್ಥಿತಿ ಕುಗ್ಗಿ ಹೋಗಿತ್ತು. ಈ ಯೋಜನೆಯ ನಂತರ ಜನರಲ್ಲಿ ಅರಿವು ಮೂಡಿ ರಸ್ತೆ ಮತ್ತು ಚರಂಡಿಗಳು ನೈರ್ಮಲ್ಯ ಕಾಪಾಡಿಕೊಂಡಿವೆ. ಇದರಿಂದಾಗಿ ಜನರ ಆರೋಗ್ಯ ಸುಧಾರಿಸಿದೆ ಎಂದರೆ ತಪ್ಪಾಗಲಾರದು. ❑

## ಒಳ್ಳೆಯ ಮಾತು

ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಲಾಢ್ಯ
ಇಲ್ಲಿನ ಗ್ರಾಮೀಣಾಭಿವೃದ್ಧಿ ಕಥೆ ದಿಗ್ಮೂಢ
ಹಳ್ಳಿಗಳ ಸಮಗ್ರ ಸುಧಾರಣೆ ದಿಕ್ಕಿನಲ್ಲಿ ಕರ್ನಾಟಕವು ಪ್ರಚಂಡ.

ಗ್ರಾಮ ಸಭೆ ಹಳ್ಳಿಗಳ ವಿಧಾನ ಸಭೆ
ಬನ್ನಿ ಗ್ರಾಮೀಣ ಸೋದರ ಸೋದರಿಯರೆ ಭಾಗವಹಿಸಿ
ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಶಸ್ವಿಗೊಳಿಸಿ.

ಹಸಿರ ಕಾಡ ಬೆಳೆಸಿ, ಹನಿ ಹನಿ ನೀರ ಉಳಿಸಿ
ಮುಂದಿನ ಪೀಳಿಗೆಗೆ ಜೀವ ಜಲ ಕೊಡಿಸಿ
ಮಾದರಿಯಾಗೋಣ ಎಲ್ಲರೂ ಶ್ರಮವಹಿಸಿ.

– ಇನಾಯತ್ ಪಾಷ. ಎಸ್

# ಗ್ರಾಮ ಸ್ವರಾಜ್ - ಫಲದಾಯಕ ಯೋಜನೆ

ತುಮಕೂರು ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಸ್ವರಾಜ್ ಯೋಜನೆಯಡಿ ಚರಂಡಿ, ರಸ್ತೆ, ಅಂಗನವಾಡಿ ಕಟ್ಟಡ, ಶಾಲಾ ರಕ್ಷಣಾ ಗೋಡೆ, ತಂಗುದಾಣ, ಸೇತುವೆ, ಸಿ.ಸಿ. ರಸ್ತೆ, ಡಾಂಬರು ರಸ್ತೆ, ಗ್ರಂಥಾಲಯ ಕಟ್ಟಡ, ಕುಡಿಯುವ ನೀರು ಕಾಮಗಾರಿಗಳು ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಮಾರ್ಗಸೂಚಿಗಳನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಮೂಲಭೂತ ಸವಲತ್ತುಗಳನ್ನು ಉತ್ತಮಪಡಿಸಿ ಗ್ರಾಮಗಳನ್ನು ಸಧೃಡಗೊಳಿಸಿ ಸಾರ್ಥಕತೆಯನ್ನು ಪಡೆಯಲಾಗಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ.

ಗ್ರಾಮ ಸ್ವರಾಜ್ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿನ ಕೆಲವು ಅಭಿವೃದ್ಧಿ ಕಾಮಗಾರಿಗಳ ಕಿರು ಚಿತ್ರಣ.

ಗುಬ್ಬಿ ಪಟ್ಟಣದಿಂದ ಸುಮಾರು 23 ಕಿ.ಮೀ. ದೂರದಲ್ಲಿರುವ ಕಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಂದು ಕುಗ್ರಾಮ ಬಿಳಿನಂದಿ. ಸ್ವತಂತ್ರ ಬಂದು 60 ವರ್ಷಗಳು ಕಳೆದಿದ್ದರೂ ಕೂಡ ಇಲ್ಲಿ ಸಂಪರ್ಕ ರಸ್ತೆಯಿಲ್ಲದೆ ಹೊರಜಗತ್ತಿನೊಂದಿಗೆ ಸಂಪರ್ಕವಿಲ್ಲದೇ ಬಾಡಿಹೋಗಿತ್ತು. ಇಂಥ ಸಂದರ್ಭದಲ್ಲಿ ಕುರುಡನ ಬಾಳಿಗೆ ಕಣ್ಣಿನಂತೆ, ಅಂಧಕಾರದಲ್ಲಿ ದಿವ್ಯ ಪ್ರಕಾಶದಂತೆ ಬೆಳಕು ಚೆಲ್ಲಿದ್ದು ಈ ಗ್ರಾಮ ಸ್ವರಾಜ್ ಯೋಜನೆ. ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯ ಅಂಶಗಳನ್ನೊಳಗೊಂಡ ಈ ಯೋಜನೆಯ ಅನುಷ್ಠಾನದಿಂದ ಬಿಳಿನಂದಿ ಗ್ರಾಮಕ್ಕೆ ಜಲ್ಲಿ ರಸ್ತೆ, ಸಿ.ಸಿ. ರಸ್ತೆ ಮತ್ತು ಅಂಗನವಾಡಿ ಕಟ್ಟಡಗಳು ನಿರ್ಮಾಣಗೊಂಡು ಇತರೆ ಗ್ರಾಮಗಳ ಮಧ್ಯೆ ತಲೆಯೆತ್ತುವಂತಾಯಿತು. ಗ್ರಾಮದ ಚಿಕ್ಕ ಮಕ್ಕಳ ಕಲಿಕೆಗೂ ಸಹ ಅವಕಾಶವಾಯಿತು.

ಕರ್ನಾಟಕ ರಾಜ್ಯವು ಆಡಳಿತ ವಿಕೇಂದ್ರೀಕರಣ ಮತ್ತು ಅಧಿಕಾರಗಳನ್ನು ಸಂವಿಧಾನಾತ್ಮಕವಾಗಿ ಪಂಚಾಯತಿಗಳಿಗೆ ನೀಡುವಲ್ಲಿ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ರಚನೆಯಾದ ನಂತರ ಇದುವರೆಗೆ ನಾಲ್ಕು ಚುನಾವಣೆಗಳು ನಡೆದಿದ್ದು ಗ್ರಾಮೀಣ ಪ್ರದೇಶಗಳ ಅಗತ್ಯಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಕ್ರೋಡೀಕರಿಸಿಕೊಂಡು ಅದನ್ನು ಸಮರ್ಪಕವಾಗಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತಿದೆ. ನಮ್ಮ ಗ್ರಾಮ ಪಂಚಾಯತಿಗೆ ಗ್ರಾಮ ಸ್ವರಾಜ್ ಯೋಜನೆಯಿಂದ ಮುಕ್ತ ಅನುದಾನವನ್ನು ಪಡೆದು ಸ್ವಂತ ಆದಾಯ ಸಂಗ್ರಹಣೆಯ ಕಾರ್ಯ ವಿಧಾನದಲ್ಲಿ ಸುಧಾರಣೆ ತರಲಾಗಿದೆ. ಸಂಗ್ರಹಣಾ ಪದ್ಧತಿ ಮತ್ತು ಹಣಕಾಸು ನಿರ್ವಹಣೆಯ ಪುನಃಶ್ಚೇತನಕ್ಕೆ ಕ್ರಮ ವಹಿಸಲಾಗಿದೆ. ಅಲ್ಲದೇ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅಡಿಯಲ್ಲಿ ವಹಿಸಲಾದ ವಿವಿಧ ಶ್ರೇಣಿಯ ಸೇವೆಗಳ ನೀಡಿಕೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ.

ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹಲವಾರು ಶಾಶ್ವತ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅಲ್ಲದೇ ನಮ್ಮ ಪಕ್ಕದ ತಾಲ್ಲೂಕಾದ ಕುಣಿಗಲ್ ತಾಲ್ಲೂಕು ಪಂಚಾಯತ್

* ಕಲ್ಲೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

ಆವರಣದಲ್ಲಿ ನಿರ್ಮಿಸಿರುವ ಸಾಮರ್ಥ್ಯಸೌಧ ಕಟ್ಟಡವು ಗ್ರಾಮ ಸ್ವರಾಜ್ ಯೋಜನೆಯಡಿ ಬೃಹತ್ ಆಸ್ತಿ ನಿರ್ಮಾಣ ಗೊಂಡಿರುವುದಕ್ಕೆ ಒಂದು ಉತ್ತಮ ಉದಾಹರಣೆ ಎಂದು ಕೇಳಿ ಮತ್ತು ನೋಡಿ ತಿಳಿದಿದ್ದೇವೆ. ಈ ಸಾಮರ್ಥ್ಯಸೌಧ ಕಟ್ಟಡದಲ್ಲಿ ಕಳೆದ ಎರಡು ವರ್ಷಗಳಿಂದ ಪಂಚಾಯತ್ ರಾಜ್ ವ್ಯವಸ್ಥೆಯ ಎಲ್ಲಾ ಭಾಗೀದಾರರಿಗೆ ತರಬೇತಿಗಳನ್ನು ನಡೆಸಿ ಸಾಮರ್ಥ್ಯ ವೃದ್ಧಿಗೊಳಿಸಲಾಗಿದೆ. ಈ ಬಗ್ಗೆ ವಿಶ್ವ ಬ್ಯಾಂಕಿನ ಅಧಿಕಾರಿಗಳು ಸಹ ತೃಪ್ತಿ ವ್ಯಕ್ತಪಡಿಸಿರುವುದು ಆಶಾದಾಯಕ ಬೆಳವಣಿಗೆ.

ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನ ಸಂದರ್ಭ ದಲ್ಲಿ ಗ್ರಾಮ ಪಂಚಾಯತಿಯಲ್ಲಿ ಕೆಲವು ಸಮಸ್ಯೆಗಳನ್ನು ಸಹ ಎದುರಿಸಲಾಗಿದ್ದು ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿದೆ.

* ಹೆಚ್ಚು ಸಂಖ್ಯೆಯ ನೋಂದಾಯಿತ ಗುತ್ತಿಗೆದಾರರು ಗ್ರಾಮ ಪಂಚಾಯತಿಗಳಿಗೆ ಬಂದು ಟೆಂಡರ್‌ನಲ್ಲಿ ಭಾಗವಹಿಸದ ಕಾರಣ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಒಂದು ಲಕ್ಷಕ್ಕಿಂತ ಕಡಿಮೆ ಮೊತ್ತದ ಕಾಮಗಾರಿಗಳನ್ನು KTPP ಪ್ರಕಾರ ಕೈಗೊಳ್ಳಲಾಗಿದೆ.
* ಒಂದಕ್ಕಿಂತ ಹೆಚ್ಚು ಬಾರಿ ಟೆಂಡರ್ ಕರೆದ ಉದಾಹರಣೆಗಳು ಸಹ ಇರುತ್ತವೆ. ಇದು ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣ ಗೊಳಿಸಲು ಅನಾನುಕೂಲವಾಗಿರುತ್ತದೆ.
* ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ನಮೂದಿಸಿ ಟೆಂಡರ್ ಸಲ್ಲಿಸಿರುವುದು.
* ಟೆಂಡರ್ ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಪರೋಕ್ಷವಾಗಿ ಭಾಗಿಯಾಗುತ್ತಿರುವುದು.

ಮೇಲಿನ ಸಮಸ್ಯೆಗಳು ಅಲ್ಪ ಪ್ರಮಾಣದ ಸಮಸ್ಯೆಗಳಾಗಿದ್ದು ಗ್ರಾಮ ಪಂಚಾಯತಿ ಮಟ್ಟದಲ್ಲಿಯೇ ನಿವಾರಿಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಗ್ರಾಮ ಸ್ವರಾಜ್ ಯೋಜನೆಯು ನಮ್ಮ ಗ್ರಾಮ ಪಂಚಾಯತಿಗೆ ಒಂದು ಫಲದಾಯಕ ಯೋಜನೆ ಎಂದು ಹೆಸರು ಪಡೆದಿದೆ. ಈ ಯೋಜನೆಯಿಂದಾಗಿ ನಮ್ಮ ಗ್ರಾಮ ಪಂಚಾಯತಿಯಲ್ಲಿ ಆದ ಅಭಿವೃದ್ಧಿಯಿಂದಾಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜನ ಸಂತೃಪ್ತ ಭಾವ ಹೊಂದಿದ್ದಾರೆ ಎಂದರೆ ಅದು ಅತಿಶಯೋಕ್ತಿ ಎನಿಸುವುದಿಲ್ಲ. ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟ ಕಡೆಯ ಪ್ರಜೆಯಿಂದ ಆರಂಭಗೊಂಡು ಎಲ್ಲರೂ ಗ್ರಾಮ ಸ್ವರಾಜ್ ಯೋಜನೆಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇಂತಹ ಮಹತ್ವದ ಯೋಜನೆಯ ಅನುಷ್ಠಾನಕ್ಕೆ ಕಾರಣರಾದ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ವಿಶ್ವ ಬ್ಯಾಂಕ್ ಅಭಿನಂದನಾರ್ಹರು.

– ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯದರ್ಶಿ, ಗ್ರಾಮ ಪಂಚಾಯತಿ,

❑

---

## ಸ್ಪಷ್ಟೀಕರಣ

ಕರ್ನಾಟಕ ವಿಕಾಸ ಮೇ 2011ರ ವಿಶೇಷ ಸಂಚಿಕೆಯಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು, ಕೋಳೂರು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಎಂಜಿಎನ್‌ಆರ್‌ಇಜಿಎ ಅನುಷ್ಠಾನದಲ್ಲಿ ಕರ್ತವ್ಯಲೋಪ ಹಾಗೂ ಅವ್ಯವಹಾರವೆಸಗಿರುವುದರಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರ ದಿನಾಂಕ : 02–02–2011ರ ಜ್ಞಾಪನದಲ್ಲಿ ನೀಡಿದ್ದ ವಿವರದ ಹಿನ್ನೆಲೆಯಲ್ಲಿ 'ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಕ್ರಮ' ಎಂದು 'ಇಲ್ಲಿ ಬೇಡ ನಿಮ್ಮ ಹೆಸರು' ಶೀರ್ಷಿಕೆಯಡಿ ಪ್ರಕಟವಾಗಿತ್ತು.

ಈ ಹಿಂದೆ ಕೋಳೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಶ್ರೀ ಇಂಧುದರ್ ಮತ್ತು ಕಾರ್ಯದರ್ಶಿ ಇಬ್ಬರು ಜಂಟಿಯಾಗಿ ಕರ್ತವ್ಯಲೋಪ ಹಾಗೂ ಅವ್ಯವಹಾರಗಳಿಗೆ ಜವಾಬ್ದಾರರಾಗಿದ್ದು ಇವರ ಅಧಿಕಾರವಧಿಯು ದಿನಾಂಕ : 25–3–2005 ರಿಂದ 29–3–2010ರವರೆಗೆ ಆಗಿರುತ್ತದೆ. ಶ್ರೀಮತಿ ಸುವರ್ಣ ಬೇಕಪ್ಪ ಅಧ್ಯಕ್ಷರು, ಗ್ರಾ.ಪಂ. ಕೋಳೂರು ಇವರ ಅಧಿಕಾರದ ಅವಧಿ 1–7–2011 ರಿಂದ ಆಗಿರುವುದರಿಂದ ಮೇಲಿನ ಕ್ರಿಮಿನಲ್ ಮೊಕದ್ದಮೆ ಇವರ ವಿರುದ್ಧ ಆಗಿರುವುದಿಲ್ಲ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿವಮೊಗ್ಗ ಇವರು ತಮ್ಮ 22–7–2011ರ ಪತ್ರದಲ್ಲಿ ಸ್ಪಷ್ಟಪಡಿಸಿರುತ್ತಾರೆ.

# ಸಿಂಧೂ ನಾಗರಿಕತೆಯಲ್ಲ, ಇದು ಸಿಂಧನೂರು ನಾಗರೀಕತೆ (ಕಥೆ)

ಭಾರತ ದೇಶ ಹಳ್ಳಿಗಳಿಂದ ಕೂಡಿದ ಕೃಷಿ ಆಧಾರಿತ ದೇಶವಾಗಿರುತ್ತದೆ. ಹಳ್ಳಿಗಳ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿರುತ್ತದೆ. ಅದರಲ್ಲಿ ಗ್ರಾಮ ಸ್ವರಾಜ್ ಯೋಜನೆಯೂ ಒಂದು. ಗ್ರಾಮ ಪಂಚಾಯತಿಗಳ ಪಾಲಿಗೆ ಈ ಯೋಜನೆ ಸಮೃದ್ಧ ಯೋಜನೆಯಾಗಿರುತ್ತದೆ. ವಿಶ್ವ ಬ್ಯಾಂಕ್ ನೆರವಿನಿಂದ ಈ ಯೋಜನೆಯು ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ಗ್ರಾಮಸ್ಥರಿಗೆ ನೀಡುವಲ್ಲಿ ಯಶಸ್ವಿಯಾಗಿದೆ. 2006–2007ನೇ ಸಾಲಿನಿಂದ ಪ್ರಾರಂಭಗೊಂಡ ಈ ಯೋಜನೆಯಡಿ ಇಲ್ಲಿಯವರೆಗೆ ಅನೇಕ ಕಾಮಗಾರಿಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಿ ಗ್ರಾಮ ಪಂಚಾಯತಿಗಳನ್ನು ಅಭಿವೃದ್ಧಿ ಪಥದಲ್ಲಿ ನಡೆಸುತ್ತಾ ಬಂದಿದೆ.

ಸಾರ್ವಜನಿಕ ಆಸ್ಪತ್ರೆಗಳು, ಶಾಲಾ ಕಟ್ಟಡಗಳು, ಸಾರ್ವಜನಿಕ ಕುಡಿಯುವ ನೀರಿನ ಪೈಪ್ ಲೈನ್, ಗ್ರಾಮಾಂತರ ರಸ್ತೆಗಳು, ರಂಗ ಮಂದಿರಗಳು ಮತ್ತು ಗ್ರಾಮ ಪಂಚಾಯತಿ ಕಟ್ಟಡಗಳಷ್ಟೇ ಅಲ್ಲದೇ ಇನ್ನು ಅನೇಕ ಹತ್ತು ಹಲವು ಕಾಮಗಾರಿಗಳನ್ನು ಗ್ರಾಮ ಸ್ವರಾಜ್ ಯೋಜನೆಯಡಿ ಅನುಷ್ಠಾನಗೊಳಿಸಲಾಗಿದೆ.

ಗ್ರಾಮ ಸ್ವರಾಜ್ ಯೋಜನೆಯಡಿ ಗುರುತಿಸಲಾದ ಉತ್ತಮ ಅಭ್ಯಾಸಗಳೆಂದರೆ; ಕಾಮಗಾರಿಗಳನ್ನು ಟೆಂಡರ್ ಪ್ರಕಟಣೆ ಮೂಲಕ ಅನುಷ್ಠಾನಗೊಳಿಸಿರುವುದರಿಂದ ಪಾರದರ್ಶಕತೆ ಜೊತೆ ಜೊತೆಗೆ ಗುಣಮಟ್ಟ ಕಾಯ್ದುಕೊಳ್ಳಲಾಗಿದೆ. ಕಾಮಗಾರಿಗಳ ಅನುಷ್ಠಾನದಲ್ಲಿ ಪರಿಸರ ನಿರ್ವಹಣಾ ಚೌಕಟ್ಟನ್ನು ಅಳವಡಿಸಿಕೊಳ್ಳಲಾಗಿದೆ. ಯೋಜನೆಯಡಿಯ ಮಾಹಿತಿ, ಶಿಕ್ಷಣ ಮತ್ತು ಸಂವಹನದ ನೆರವಿನಿಂದ ಸಾರ್ವಜನಿಕರಿಗೆ ಅರಿವು ಮೂಡಿಸಿ ಗ್ರಾಮ ಪಂಚಾಯತಿಗಳ ಕರ ವಸೂಲಿಯಲ್ಲಿ ವ್ಯಾಪಕ ಹೆಚ್ಚಳ ಮಾಡಲು ಸಾಧ್ಯವಾಗಿದೆ. ಅಲ್ಲದೇ ಗ್ರಾಮ ಪಂಚಾಯತಿಗಳ ಜಮಾ ಬಂಧಿ, ಜೋಡಿ ನಮೂದು ಲೆಕ್ಕ ಪತ್ರ ಪದ್ಧತಿ ಬಗ್ಗೆಯೂ ಸಹ ತಿಳುವಳಿಕೆ ಮೂಡಿಸಲಾಗಿದೆ.



ಗ್ರಾಮ ಸ್ವರಾಜ್ ಯೋಜನೆಯ ಲಾಭವನ್ನು ಪಡೆದ ಸಾರ್ವಜನಿಕರು ಈ ಯೋಜನೆಯ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಿದ್ದಾರೆ. ತಳ ಮಟ್ಟದಲ್ಲಿ ಯೋಜನೆಯ ಕುರಿತು ಜಾಗೃತಿ ಮೂಡಿಸುವಲ್ಲಿ ತಾಲ್ಲೂಕು ಸಂಪನ್ಮೂಲ ಕೋಶದ ಸಮಾಲೋಚಕರುಗಳ ಪಾತ್ರವನ್ನು ಕಡೆಗಣಿಸುವಂತಿಲ್ಲ.

* ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಿಂಧನೂರು



ಗ್ರಾಮ ಸ್ವರಾಜ್ ಯೋಜನೆಯ ಲಾಭವನ್ನು ಪಡೆದ ಸಾರ್ವಜನಿಕರು ಈ ಯೋಜನೆಯ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಿದ್ದಾರೆ. ಗ್ರಾಮ ಸ್ವರಾಜ್ ಎಂದರೆ ಹರ್ಷಿಸುತ್ತಿದ್ದಾರೆ. ತಳ ಮಟ್ಟದಲ್ಲಿ ಯೋಜನೆಯ ಕುರಿತು ಜಾಗೃತಿ ಮೂಡಿಸುವಲ್ಲಿ ತಾಲ್ಲೂಕು ಸಂಪನ್ಮೂಲ ಕೋಶದ ಸಮಾಲೋಚಕರುಗಳ ಪಾತ್ರವನ್ನು ಕಡೆಗಣಿಸುವಂತಿಲ್ಲ.

ಗ್ರಾಮ ಸ್ವರಾಜ್ಯ ಎಂದರೆ ಸರ್ವಶಕ್ತಗೊಂಡ ಗ್ರಾಮಗಳು ಎಂದಾಗುತ್ತದೆ. ಇಲ್ಲಿ ಗ್ರಾಮಸ್ಥರು ರಾಜರುಗಳು, ಗ್ರಾಮದ ಅಭಿವೃದ್ಧಿಯಲ್ಲಿ ಅವರ ಪಾತ್ರ ಗಣನೀಯವಾದುದು. ಗ್ರಾಮದ ಏಳಿಗೆಯಲ್ಲಿ ಅವರ ಪಾತ್ರದ ಬಗ್ಗೆ ಗ್ರಾಮ ಸ್ವರಾಜ್ ಯೋಜನೆ ತಿಳುವಳಿಕೆ ಮೂಡಿಸುವ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದೆ. ಗ್ರಾಮ ಸ್ವರಾಜ್ ಯೋಜನೆ ನಮ್ಮ ತಾಲ್ಲೂಕಿಗೆ ಬಂದ ಮೇಲೆ ಗ್ರಾಮ ಪಂಚಾಯತಿಗಳಲ್ಲಿನ ವಾರ್ಡ್, ಗ್ರಾಮ ಸಭೆಗಳು ಅತ್ಯಂತ ಪರಿಣಾಮಕಾರಿಯಾಗಿ ನಡೆದಿರುವುದನ್ನು ಮತ್ತು ಈ ಸಭೆಗಳಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಖಾತ್ರಿಗೊಂಡಿರುವುದನ್ನು ಗುರುತಿಸಬಹುದು. ಇದಕ್ಕೆ ಪೂರಕವಾಗಿ ಯೋಜನೆಯಡಿ ನಡೆಸಲಾದ ಬೀದಿ ನಾಟಕಗಳು ಮತ್ತು ಕಲಾಜಾಥಗಳು ಸಹಕಾರಿಯಾಗಿವೆ.

ಯೋಜನಾ ವತಿಯಿಂದ ಸಿಂಧನೂರು ತಾಲ್ಲೂಕು ಕೇಂದ್ರದಲ್ಲಿ ನಿರ್ಮಾಣ ಮಾಡಲಾಗಿರುವ ಸಾಮರ್ಥ್ಯ ಸೌಧ ಕಟ್ಟಡವು ಮಹಲಿನ ರೀತಿ ರೂಪುಗೊಂಡಿದ್ದು ಇದರ ಲಾಭವನ್ನು ಪಂಚಾಯತ್ ರಾಜ್ ವ್ಯವಸ್ಥೆಯ ಕಟ್ಟ ಕಡೆಯ ಭಾಗೀದಾರನು ಸಹ ಸದ್ವಿನಿಯೋಗ ಪಡೆದುಕೊಳ್ಳುತ್ತಿದ್ದಾನೆ. ತಾಲ್ಲೂಕಿನಲ್ಲಿ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ನಡೆಸಲು ಸುಸಜ್ಜಿತ ಕಟ್ಟಡದ ಕೊರತೆ ಇದರಿಂದ ನಿವಾರಣೆ ಆದಂತಾಗಿದೆ. ಈ ಕಾರಣಕ್ಕಾಗಿ ತಾಲ್ಲೂಕಿನ ಜನತೆ ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನ ಮಾಡಿದ್ದಕ್ಕಾಗಿ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಲಿದೆ.

ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳು ಜನ ಸಾಮಾನ್ಯರ ಭಾವನೆಗಳಿಗೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸುತ್ತಾ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಮನಪೂರ್ವಕವಾಗಿ ಸೇವೆ ಸಲ್ಲಿಸಿರುತ್ತಾರೆ. ತಾಲ್ಲೂಕಿನಲ್ಲಿ ಈ ಯೋಜನೆ ಜಾರಿಯಾದಾಗಿನಿಂದ ಹಲವಾರು ಮುಖಾಮುಖಿ ಮತ್ತು ಉಪಗ್ರಹ ಆಧಾರಿತ ತರಬೇತಿಗಳನ್ನು ಹಮ್ಮಿಕೊಂಡಿರುವುದರಿಂದ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ಸಾಮರ್ಥ್ಯ ವೃದ್ಧಿಯಾಗಿರುವುದರಲ್ಲಿ ಅನುಮಾನವೇ ಇಲ್ಲ. ಹೀಗೆ ಗ್ರಾಮ ಸ್ವರಾಜ್ ಯೋಜನೆಯು ತಾಲ್ಲೂಕಿನಲ್ಲಿ ಜನರ ಮೆಚ್ಚುಗೆಯನ್ನು ಪಡೆದ ಯೋಜನೆಯಾಗಿರುತ್ತದೆ. ಗ್ರಾಮ ಸ್ವರಾಜ್ ಯೋಜನೆಯನ್ನು ತಾಲ್ಲೂಕಿನಲ್ಲಿ ಮತ್ತೊಂದು ಅವಧಿಗೆ ಅನುಷ್ಠಾನಗೊಳಿಸಿದಲ್ಲಿ ತಾಲ್ಲೂಕಿನಲ್ಲಿರುವ ಗ್ರಾಮೀಣ ಭಾಗದ ಜನರ ಬದುಕು ಉತ್ತಮಗೊಳ್ಳುವುದು. ಅದಕ್ಕಾಗಿ ಸರ್ಕಾರ ಈ ಬಗ್ಗೆ ಮುಂದಾಗಬೇಕೆಂದು ಜನರ ಒತ್ತಾಸೆಯಾಗಿದೆ.

ಗ್ರಾಮ ಸ್ವರಾಜ್ಯ ಗಾಂಧೀಜಿಯವರ ಕನಸಾಗಿದೆ. ಸ್ಥಳಿಯ ಸ್ವಯಂ ಸರ್ಕಾರಗಳನ್ನು ನಿರ್ಮಾಣ ಮಾಡುವಲ್ಲಿ ಗ್ರಾಮ ಸ್ವರಾಜ್ ಯೋಜನೆಯು ಸಹ ತನ್ನ ಕೊಡುಗೆ ನೀಡಿದೆ. ಗ್ರಾಮ ಸ್ವರಾಜ್‌ನಂತಹ ಒಂದು ಉತ್ತಮ ಯೋಜನೆ ಬಗ್ಗೆ ನಮ್ಮ ಅಭಿಪ್ರಾಯ ಹಂಚಿಕೊಳ್ಳಲು ವೇದಿಕೆ ಕಲ್ಪಿಸಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

❑

# ಹಸನಾದ ಹಡಲಸಂಗ ಹಳ್ಳಿ ಬದುಕು

– ಸತ್ಯಕಾಮ ಆರ್. ಕಟ್ಟಿ *

ಗ್ರಾಮ ಸ್ವರಾಜ್ ಯೋಜನೆ ಜಾರಿಗೆ ಬಂದ ಮೇಲೆ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದ ಇಂಡಿ ತಾಲ್ಲೂಕಿನ ಹಡಲಸಂಗ ಗ್ರಾಮ ಪಂಚಾಯಿತಿ ಕಾಲಮಿತಿಯಲ್ಲಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ.

ಜಾಗತಿಕ ಬ್ಯಾಂಕಿನ ಸಂಪೂರ್ಣ ಆರ್ಥಿಕ ನೆರವಿನಿಂದ 2006–07 ರಿಂದ 2010–11ರ ಅವಧಿಯಲ್ಲಿ ನಮ್ಮ ಗ್ರಾಮ ಪಂಚಾಯತಿಯಲ್ಲಿ ಅನುಷ್ಠಾನಗೊಂಡ ಗ್ರಾಮ ಸ್ವರಾಜ್ ಯೋಜನೆಯದೇ ಎಲ್ಲಾ ಕಡೆ ಮಾತು. ನಮ್ಮ ಪಂಚಾಯತಿಯಲ್ಲಿನ ಒಟ್ಟು ಜನಸಂಖ್ಯೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜನಸಂಖ್ಯೆ ಹಾಗೂ ನಿರಕ್ಷರಸ್ಥರ ಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ನೀಡುತ್ತಾ ಬಂದಿರುವುದು ಈ ಯೋಜನೆಯ ವಿಶೇಷತೆಯಾಗಿದೆ. ಇದು ನಮ್ಮ ಪಂಚಾಯತಿ ವ್ಯಾಪ್ತಿಯಲ್ಲಿ ಹಳ್ಳಿ ಬದುಕನ್ನು ಹಸನಾಗಿಸಲು ನೆರವಾಗಿದೆ.

ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲ ವಾರ್ಡ್‌ಗಳಲ್ಲಿ ವಾರ್ಡ್‌ಸಭೆಗಳನ್ನು ಸಂಘಟಿಸಿ, ಪ್ರತಿಯೊಂದು ವಾರ್ಡಿನ ಜನರ ಸಹಭಾಗಿತ್ವದೊಂದಿಗೆ ಅವರ ಅತ್ಯವಶ್ಯಕ ಮೂಲಭೂತ ಸೌಕರ್ಯಗಳ ಕೊರತೆಗಳನ್ನು ಆದ್ಯತೆಯ ಮೇರೆಗೆ ಪಟ್ಟಿ ಮಾಡಿ ಯಾದಿಯನ್ನು ತಯಾರಿಸಲಾಗಿದೆ. ನಂತರ ಈ ಯಾದಿಯಲ್ಲಿನ ಆದ್ಯತೆಗಳನ್ನು ಅನುದಾನದ ಲಭ್ಯತೆಗನುಗುಣವಾಗಿ ಗ್ರಾಮ ಸಭೆಯಲ್ಲಿ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳುವುದರ ಮೂಲಕ ಸಾಮಾನ್ಯ ಸಭೆಯಲ್ಲಿ ಯೋಜನೆಯ ಮಾರ್ಗಸೂಚಿಗಳಿಗನುಗುಣವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸಿರುವುದು ಪ್ರತಿ ಹಂತದಲ್ಲಿ ಪಾರದರ್ಶಕತೆ ಕಾಯ್ದು ಕೊಳ್ಳಲು ಕಾರಣವಾಗಿದೆ.



ಇಂಡಿ ತಾಲ್ಲೂಕಿನಲ್ಲಿ ಬರುವ ಹಡಲಸಂಗ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹಡಲಸಂಗ ಗ್ರಾಮಕ್ಕೆ ಸೇರಿಕೊಂಡ ಆರು ತಾಂಡಾಗಳು, ಸೊನಕಹಳ್ಳಿ ಮತ್ತು ಸಾತಲಗಾಂವ (ಪಿ.ಬಿ) ಗ್ರಾಮಗಳು ಬರುತ್ತವೆ. ಕಳೆದ 5 ಆರ್ಥಿಕ ವರ್ಷಗಳಲ್ಲಿ ಹಡಲಸಂಗ ಗ್ರಾಮ ಪಂಚಾಯತಿಗೆ ಈ ಕೆಳಕಾಣಿಸಿದಂತೆ ಸರ್ಕಾರದಿಂದ ಅನುದಾನ ಬಿಡುಗಡೆ ಯಾಗಿದೆ.

---

* ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ., ಹಡಲಸಂಗ

ಕ್ರೋಡೀಕರಿಸಿಕೊಂಡು ಅದನ್ನು ಸಮರ್ಪಕವಾಗಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತಿದೆ. ನಮ್ಮ ಗ್ರಾಮ ಪಂಚಾಯತಿಗೆ ಗ್ರಾಮ ಸ್ವರಾಜ್ ಯೋಜನೆಯಿಂದ ಮುಕ್ತ ಅನುದಾನವನ್ನು ಪಡೆದು ಸ್ವಂತ ಆದಾಯ ಸಂಗ್ರಹಣೆಯ ಕಾರ್ಯ ವಿಧಾನದಲ್ಲಿ ಸುಧಾರಣೆ ತರಲಾಗಿದೆ. ಸಂಗ್ರಹಣಾ ಪದ್ಧತಿ ಮತ್ತು ಹಣಕಾಸು ನಿರ್ವಹಣೆಯ ಪುನಃಶ್ಚೇತನಕ್ಕೆ ಕ್ರಮ ವಹಿಸಲಾಗಿದೆ. ಅಲ್ಲದೇ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅಡಿಯಲ್ಲಿ ವಹಿಸಲಾದ ವಿವಿಧ ಶ್ರೇಣಿಯ ಸೇವೆಗಳ ನೀಡಿಕೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ.

| 2006-07 | 2007-08 | 2008-09 | 2009-10 | 2010-11 | ಒಟ್ಟು |
|---|---|---|---|---|---|
| 5.90 | 7.86 | 9.83 | 7.86 | 6.90 | 37.35 |

ಬಿಡುಗಡೆಯಾದ ಅನುದಾನವನ್ನು ಯೋಜನೆಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ವಿನಿಯೋಗಿಸಿಕೊಂಡು ಈ ಕೆಳಗೆ ಕಾಣಿಸಿದ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗಿದೆ.

(1) ಸಿಮೆಂಟ್ ಕಾಂಕ್ರೀಟ್ ರಸ್ತೆ

(2) ಅಂಗನವಾಡಿ ಕಟ್ಟಡ

(3) ಪ್ರಾಥಮಿಕ ಶಾಲೆ ಹೆಚ್ಚುವರಿ ಕೊಠಡಿ

(4) ಶಾಲಾ ಕಾಂಪೌಂಡ್

(5) ಶೌಚಾಲಯ

(6) ಶಾಲಾ ಆಟದ ಮೈದಾನ ಅಭಿವೃದ್ಧಿ

(7) ಸಮುದಾಯ ಶೌಚಾಲಯ

(8) ನೀರು ಸರಬರಾಜು ವ್ಯವಸ್ಥೆ

(9) ರಸ್ತೆಗೆ ಸೇತುವೆ

(10) ಎ.ಎನ್.ಎಂ. ಕೇಂದ್ರದ ಸುಧಾರಣೆ

(11) ಅಂಗನವಾಡಿ ಕೇಂದ್ರಕ್ಕೆ ಶೌಚಾಲಯ

(12) ಬಿಸಿ ಊಟದ ಅಡುಗೆ ಕೋಣೆ ನಿರ್ಮಾಣ

(13) ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ, ಇತ್ಯಾದಿ

ವಿಶ್ವ ಸಂಸ್ಥೆಯ ಅಂಗ ಸಂಸ್ಥೆಗಳಲ್ಲೊಂದಾದ ವಿಶ್ವ ಬ್ಯಾಂಕ್ ಹಿಂದುಳಿದ ಪ್ರದೇಶಾಭಿವೃದ್ಧಿಗೆ ಹಾಕಿಕೊಂಡ ಈ ಯೋಜನೆಯು ನಮ್ಮ ಗ್ರಾಮ ಪಂಚಾಯತಿಗೆ ಬರುವ ಮೊದಲು ಕಡು ಬಡವರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದರು. ಗ್ರಾಮ ಸ್ವರಾಜ್ ಯೋಜನೆ ಬಂದ ಮೇಲೆ ಇಂಡಿ ತಾಲ್ಲೂಕಿನ ಹಡಲಸಂಗ ಗ್ರಾಮ ಪಂಚಾಯತಿಯು ಎಲ್ಲ ದಿನದಲ್ಲಿ ಅಭಿವೃದ್ಧಿ ಹೊಂದಿದೆ ಎಂದು ಹೇಳಲು ನಮಗೆ ಸಂತೋಷವಾಗುತ್ತದೆ.

❑



# ಬಿಜಾಪುರ ಜಿಲ್ಲೆಯಲ್ಲಿ ಗ್ರಾಮ ಸ್ವರಾಜ್‌ನಿಂದ ಅಭಿವೃದ್ಧಿ ಪರ್ವ

ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿರುವ ಉತ್ತರ ಕರ್ನಾಟಕದ ಬಿಜಾಪುರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಗ್ರಾಮ ಸ್ವರಾಜ್ ಯೋಜನೆ ಯಿಂದಾದ ಪ್ರಯೋಜನದ ನೋಟ.

ಬಿಜಾಪುರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಬಸವನ ಬಾಗೇವಾಡಿ, ಸಿಂಧಗಿ, ಮುದ್ದೇಬಿಹಾಳ ಮತ್ತು ಇಂಡಿ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲ್ಪಟ್ಟಿವೆ. ಈ ತಾಲ್ಲೂಕುಗಳಲ್ಲಿ ಅನುಷ್ಠಾನಗೊಂಡ ಗ್ರಾಮ ಸ್ವರಾಜ್ ಯೋಜನೆಯಡಿ ಈಡೇರಿಸಲಾದ ಭರವಸೆಗಳ ಬಗ್ಗೆ ಒಂದು ಸಿಂಹಾವಲೋಕನ.

**ಯೋಜನೆಯಡಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳು ಹಾಗೂ ವ್ಯಯಿಸಲಾದ ವೆಚ್ಚಗಳ ಸಂಕ್ಷಿಪ್ತ ವಿವರ :**

2006–07ನೇ ಸಾಲಿನಿಂದ ಇದುವರೆಗೆ 2857 ವಿವಿಧ ಕಾಮಗಾರಿಗಳನ್ನು ರೂ. 2487.92 ಲಕ್ಷಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗಿದೆ.

- ಗ್ರಾಮಗಳಲ್ಲಿ 746 ಕಾಂಕ್ರೀಟ್ ರಸ್ತೆ ಹಾಗೂ ಡಾಂಬರು ರಸ್ತೆಗಳ ನಿರ್ಮಾಣ ಕಾಮಗಾರಿಗಳಿಗಾಗಿ ರೂ. 404.30 ಲಕ್ಷಗಳ ವೆಚ್ಚ.
- ಗ್ರಾಮಗಳಲ್ಲಿ 1007 ಡಕ್ ಹಾಗೂ ಚರಂಡಿಗಳ ನಿರ್ಮಾಣ ಕಾಮಗಾರಿಗಳಿಗಾಗಿ ರೂ. 342.46 ಲಕ್ಷಗಳ ವೆಚ್ಚ.
- ರೂ. 60.31 ಲಕ್ಷಗಳ ವೆಚ್ಚದಲ್ಲಿ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ.
- ಗ್ರಾಮ ಪಂಚಾಯತಿ ಕಟ್ಟಡಗಳ ನಿರ್ಮಾಣ ಮತ್ತು ನವೀಕರಣದ 61 ಕಾಮಗಾರಿಗಳಿಗೆ ರೂ. 64.45 ಲಕ್ಷಗಳ ವೆಚ್ಚ.
- 347 ಶಾಲಾ ಕೊಠಡಿ, ಅಡುಗೆ ಕೊಠಡಿ ನವೀಕರಣ ಹಾಗೂ ಕಾಪೌಂಡ್ ನಿರ್ಮಾಣ ಕಾಮಗಾರಿಗಳಿಗೆ ರೂ. 76.22 ಲಕ್ಷಗಳ ವೆಚ್ಚ.
- ಅಂಗನವಾಡಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆಯ 143 ಕಾಮಗಾರಿಗಳಿಗೆ ರೂ. 178.64 ಲಕ್ಷಗಳ ವೆಚ್ಚ.
- 11 ಗ್ರಂಥಾಲಯ ಕಟ್ಟಡಗಳ ನಿರ್ಮಾಣಕ್ಕಾಗಿ ರೂ. 19.68 ಲಕ್ಷಗಳ ವೆಚ್ಚ
- 240 ಕುಡಿಯುವ ನೀರಿನ ಕಾಮಗಾರಿಗಳಿಗೆ ರೂ. 113.39 ಲಕ್ಷಗಳ ವೆಚ್ಚ
- ಶೌಚಾಲಯ, ಅಂಗಡಿ ಮಳಿಗೆ ಇನ್ನಿತರೆ 167 ಕಾಮಗಾರಿಗಳ ಅನುಷ್ಠಾನಕ್ಕಾಗಿ ರೂ. 52.47 ಲಕ್ಷಗಳ ವೆಚ್ಚ.

* ಜಿಲ್ಲಾ ಪಂಚಾಯತಿ, ಬಿಜಾಪುರ

ಗ್ರಾಮ ಸ್ವರಾಜ್ ಯೋಜನಾ ಅಡಿಯಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸಹಯೋಗದಲ್ಲಿ ಜಿಲ್ಲೆಯಲ್ಲಿ ಕೈಗೊಳ್ಳಲಾದ ತರಬೇತಿ ಚಟುವಟಿಕೆಗಳ ಸ್ಥೂಲ ವಿವರ :

- ದಿನಾಂಕ : 24.08.2007 ರಿಂದ 03.01.2008ರವರೆಗೆ ಮತ್ತು ದಿನಾಂಕ : 06.12.2008 ರಿಂದ 17.09.2009 ರವರೆಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಹಾಯಕಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಉಪಗ್ರಹ ಆಧಾರಿತ ತರಬೇತಿ.
- ದಿನಾಂಕ : 16.06.2008 ರಿಂದ 24.06.2008ರವರೆಗೆ ಹಾಗೂ ದಿನಾಂಕ : 19.08.2009 ರಿಂದ 02.09.2009 ರವರೆಗೆ ಪರಿಸರ ನಿರ್ವಹಣಾ ಚೌಕಟ್ಟಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಕಾರ್ಯದರ್ಶಿಗಳಿಗೆ ತರಬೇತಿ.
- ದಿನಾಂಕ : 12.05.2008 ರಿಂದ 15.05.2008 ರವರೆಗೆ ಜೋಡಿ ನಮೂದು ದಾಖಲೆ ಲೆಕ್ಕ ಪತ್ರ ಪದ್ಧತಿ ಕುರಿತು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಬಿಲ್ ಕಲೆಕ್ಟರ್‌ಗಳಿಗೆ ಉಪಗ್ರಹ ಆಧಾರಿತ ತರಬೇತಿ.
- ದಿನಾಂಕ : 09.09.2011ರಂದು ಜಮಾಬಂದಿ ಕುರಿತು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ಸದಸ್ಯರ ತರಬೇತಿ.

### ಯೋಜನೆ ಅನುಷ್ಠಾನದಲ್ಲಿ ಕ್ಷೇತ್ರ ಮಟ್ಟದಲ್ಲಿ ಎದುರಿಸಲಾದ ಸಮಸ್ಯೆಗಳು

- ಮಾರ್ಗಸೂಚಿಗಳು ಹಾಗೂ ನಿಯಮಗಳನ್ನು ಪಾಲಿಸುವಲ್ಲಿ ರಾಜಕೀಯ ಹಿನ್ನೆಲೆಯ ವ್ಯಕ್ತಿಗಳಿಂದ ಹಸ್ತಕ್ಷೇಪ.
- ಕ್ರಿಯಾ ಯೋಜನೆಯಲ್ಲಿನ ಅನುಮೋದಿತ ಕಾಮಗಾರಿಗಳ ಬದಲಾವಣೆಗೆ ಗ್ರಾಮ ಪಂಚಾಯತಿ ಸದಸ್ಯರುಗಳ ಒತ್ತಡ.
- ಕಾಮಗಾರಿಗಳ ಅನುಷ್ಠಾನದಲ್ಲಿ ಸ್ಥಳ ತಕರಾರುಗಳು.
- ಕಾಮಗಾರಿಗಳ ಅನುಷ್ಠಾನಕ್ಕೆ ಆಹ್ವಾನಿಸಲಾದ ಟೆಂಡರ್‌ಗಳು/ಕೊಟೇಷನ್ ಪ್ರಕ್ರಿಯೆಗಳಲ್ಲಿ ಗ್ರಾಮ ಪಂಚಾಯತಿಯಲ್ಲಿನ ಚುನಾಯಿತ ಪ್ರತಿನಿಧಿಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗವಹಿಸುತ್ತಿರುವುದು.

### ಜಿಲ್ಲೆಯಲ್ಲಿ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಯಶೋಗಾಥೆ

- ಸಾರ್ವಜನಿಕರು ಹಾಗೂ ಜನ ಪ್ರತಿನಿಧಿಗಳಿಗೆ ವಾರ್ಡ್ ಮತ್ತು ಗ್ರಾಮ ಸಭೆಗಳ ಮಹತ್ವದ ಬಗ್ಗೆ ಅರಿವು ಮೂಡಿಸಿರುವುದು.
- ಸಾರ್ವಜನಿಕರು ಹಾಗೂ ಜನ ಪ್ರತಿನಿಧಿಗಳಿಗೆ ಗ್ರಾಮ ಪಂಚಾಯತಿ ಕರ್ತವ್ಯಗಳು ಮತ್ತು ಗ್ರಾಮಗಳ ಅಭಿವೃದ್ಧಿಗೆ ತಮ್ಮ ಚಿಂತನೆಗಳನ್ನು ಹುಟ್ಟು ಹಾಕುವ ಸಾಮರ್ಥ್ಯದ ಬೆಳವಣಿಗೆ.
- ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ನಂತರ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಆಸ್ತಿ ಸೃಜನೆಯಾಗಿದೆ.
- ಗ್ರಾಮ ಸ್ವರಾಜ್ ಯೋಜನೆಯ ಅನುದಾನದ ನೆರವಿನಿಂದ ಸೃಜನೆಗೊಂಡ ಆಸ್ತಿಗಳಿಂದ ಗ್ರಾಮ ಪಂಚಾಯತಿಗಳ ಸಂಪನ್ಮೂಲ ವೃದ್ಧಿಯಾಗಿದೆ.
- ಯೋಜನೆಯಡಿ ಕೈಗೊಂಡ ಅತ್ಯಂತ ಅವಶ್ಯಕ ಜನೋಪಯೋಗಿ ಕಾಮಗಾರಿಗಳಿಂದಾಗಿ ಗ್ರಾಮಗಳು ಅನುಕೂಲತೆ ಹೊಂದಿದ್ದು, ಗ್ರಾಮದ ಸಾರ್ವಜನಿಕರಿಗೆ ತೃಪ್ತಿ ತಂದಿದೆ.
- ಗ್ರಾಮ ಪಂಚಾಯತಿಗಳ ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ಇವುಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ವಸೂಲಾತಿಯಲ್ಲಿ ಉತ್ತಮ ಪ್ರಗತಿ ಸಾಧಿಸಿರುವುದು ಗಮನಿಸಬಹುದಾದ ಅಂಶವಾಗಿದೆ. ಇದು ಗ್ರಾಮ ಸ್ವರಾಜ್ ಯೋಜನೆಯಿಂದ ಸಾಧ್ಯವಾಗಿರುವುದು ಹೆಮ್ಮೆಯ ಸಂಗತಿ.
- ಯೋಜನೆಯಡಿಯ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಪರಿಸರದ ಮೇಲೆ ಯಾವುದೇ ಧಕ್ಕೆಯಾಗದಂತೆ ತಡೆಯಲು ಪರಿಸರ ನಿರ್ವಹಣಾ ಓ.ಕೆ ಕಾರ್ಡ್‌ಗಳ ಪರಿಣಾಮಕಾರಿ ಬಳಕೆ.
- ಜೋಡಿ ನಮೂದು ಲೆಕ್ಕ ಪತ್ರ ಪದ್ಧತಿ ಮೂಲಕ ಪಂಚಾಯತಿಗಳ ಲೆಕ್ಕಪತ್ರಗಳನ್ನು ನಿರ್ವಹಿಸಿ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ.






ಗ್ರಾಮ ಸ್ವರಾಜ್ ಯೋಜನೆ ಬಗ್ಗೆ ಸಾರ್ವಜನಿಕರ ಅಭಿಪ್ರಾಯ – ಒಂದು ಸಂವಾದ.

# ಸಂವಾದದ ಆಯ್ದ ಭಾಗ


– ಪರಿಕಲ್ಪನೆ ಮತ್ತು ರಚನೆ : **ಇನಾಯತ್ ಪಾಷ, ಎಸ್.** *


ಗ್ರಾಮ ಸ್ವರಾಜ್ ಯೋಜನೆ ಅನುಷ್ಠಾನದ ಪ್ರಯೋಜನದ ಕುರಿತು ಯೋಜನಾ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿಗಳಲ್ಲಿ ಯೋಜನೆಯ ಪಂಚಾಯತಿ ಸೌಲಭ್ಯ ತಜ್ಞರುಗಳು ಆಗಿಂದಾಗ್ಗೆ ಸ್ಥಳೀಯ ಫಲಾನುಭವಿಗಳ ಸಂದರ್ಶನಗಳನ್ನು ನಡೆಸಿ ಅವರ ಅಭಿಪ್ರಾಯಗಳನ್ನು ಸಹ ದಾಖಲಿಸುತ್ತಾ ಬಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಹಲವಾರು ಫಲಾನುಭವಿಗಳ ಪ್ರಾತಿನಿಧಿಕವಾಗಿ ಸಂವಾದವೊಂದರ ಪರಿಕಲ್ಪನೆಯು ಈ ಲೇಖನದಲ್ಲಿ ಪ್ರಸ್ತುತವಿದೆ.

| | | |
|---|---|---|
| **ಪಂ.ಸೌ.ತಜ್ಞರು** | : | ನಮಸ್ಕಾರ, ನಿಮ್ಮ ಹೆಸರೇನು ? |
| **ಪ್ರಜೆ** | : | ನಮಸ್ಕಾರ, ರಂಗಣ್ಣ ಅಂತಾ ಕರೀತರ ಸಾಹೇಬ್ರ |
| **ಪಂ.ಸೌ.ತಜ್ಞರು** | : | ರಂಗಣ್ಣ ತಾವು ಏನು ಓದಿದ್ದೀರಿ ? |
| **ರಂಗಣ್ಣ** | : | ಏಳನೇ ಇಯತ್ತೆವರೆಗೆ ಕಲ್ತಿದಿನಿ ಸಾಹೇಬ್ರ |
| **ಪಂ.ಸೌ.ತಜ್ಞರು** | : | ರಂಗಣ್ಣ ತಾವು ಏನು ಉದ್ಯೋಗ ಮಾಡಿಕೊಂಡಿದಿರಿ ? |
| **ರಂಗಣ್ಣ** | : | ಹಳ್ಳಿಯಾಗ ಏನು ಕಸುಬು ಇರ್ತದ ಸಾಹೇಬ್ರ? ಹೊಲ ಹುಳುಮೆ ಮಾಡೋದ ಬಿಟ್ಟು |
| **ಪಂ.ಸೌ.ತಜ್ಞರು** | : | ನಿಮ್ಮದು ಎಷ್ಟು ಎಕರೆ ಜಮೀನಿದೆ ? |
| **ರಂಗಣ್ಣ** | : | ಮೂರು ಎಕರೆ ಜಮೀನದ |
| **ಪಂ.ಸೌ.ತಜ್ಞರು** | : | ಹಳ್ಳಿಯಲ್ಲಿ ನಡೆಯುವ ಬೆಳವಣಿಗೆಗಳ ಬಗ್ಗೆ ತಮಗೆ ಅರಿವಿದೆಯೇ ರಂಗಣ್ಣ ? |
| **ರಂಗಣ್ಣ** | : | ಕೆಲಸ ಇಲ್ಲದಾಗ ಊರ ಮುಂದೆ ಇರ ಬಸವಣ್ಣ ಗುಡಿ ಮುಂದ ಹಳ್ಳಿ ಜನ ಕೂತು ಊರ್ ಬಗ್ಗೆ ಅದ ಇದ ಮಾತಾಡ್ತಿರ್‍ತೀವಿ ಸಾಹೇಬ್ರ |
| **ಪಂ.ಸೌ.ತಜ್ಞರು** | : | ಅಂಗಾದ್ರೆ ಗ್ರಾಮ ಪಂಚಾಯತಿಯಲ್ಲಿನ ವಿಷಯಗಳ ಬಗ್ಗೆ ಗೊತ್ತಿರಬೇಕಲ್ಲ ? |
| **ರಂಗಣ್ಣ** | : | ಅದೇನೋ ಸಾಹೇಬ್ರ, ಗ್ರಾಮ ಪಂಚಾಯತಿಯಲ್ಲಿ ಇತ್ತೀಚೆಗೆ ಹೊಸ ಹೊಸ ಯೋಜನೆಗಳು ಹಳ್ಳಿ ಅಭಿವೃದ್ಧಿಗೆ ಬಂದಾವ ಅಂತ ಜನ ಮಾತಾಡ್ತ ಇರತಾರ. ಆವಾಗ ಕೇಳಿ ತಿಳಕಂಡಿವ್ರಿ. |

---

* ಕಾರ್ಯನಿರ್ವಾಹಕ ಸಹಾಯಕ, ಗ್ರಾ.ಸ್ವಯೋ.,

| | | |
|---|---|---|
| ಪಂ.ಸೌ.ತಜ್ಞರು | : | ಯಾವ ಯಾವ ಯೋಜನೆಗಳು ಬಂದಿದವೆ ಅಂತ ಏನಾದರೂ ಗೊತ್ತ ? |
| ರಂಗಣ್ಣ | : | ಅದೇ ಸಾಹೇಬ್ರ ಕೂಲಿ ಯೋಜನೆ (ಉದ್ಯೋಗ ಖಾತ್ರಿ ಯೋಜನೆ), ಗ್ರಾಮ ಸ್ವರಾಜ್, ಸುವರ್ಣ ಗ್ರಾಮೋದಯ |
| ಪಂ.ಸೌ.ತಜ್ಞರು | : | ರಂಗಣ್ಣ ನಾವು ಗ್ರಾಮ ಸ್ವರಾಜ್ ಯೋಜನಾ ಕಛೇರಿಯಿಂದ ಬಂದಿದ್ದೇವೆ, ಈ ಯೋಜನೆ ಬಗ್ಗೆ ನಿಮಗೆಷ್ಟು ಗೊತ್ತು ? |
| ರಂಗಣ್ಣ | : | ನಮ್ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು ಅದ ಅದಕ್ಕ ಇಲ್ಲಿ ಅಭಿವೃದ್ಧಿ ಮಾಡಕ ಈ ಯೋಜನೆ ಬಂದದ ಅಂತಾ ಗ್ರಾಮ ಪಂಚಾತೆರು ಗ್ರಾಮ ಸಭೆನಲ್ಲಿ ಹೇಳಿದ್ದು ಕೇಳಿದಿನಿ ಸಾಹೇಬ್ರ. |
| ಪಂ.ಸೌ.ತಜ್ಞರು | : | ಮತ್ತಿನ್ನೇನು ಕೇಳಿದಿರಿ ರಂಗಣ್ಣ ? |
| ರಂಗಣ್ಣ | : | ಹಳ್ಳಿಯಾಗ ಬೇಕಾಗಿರ ಕೆಲಸಗಳನ್ನ ಮಾಡಲು ವಿಶ್ವ ಬ್ಯಾಂಕ್‌ನೋರು ರೊಕ್ಕ ಕೊಡ್ತದರ ಅಂತಾನು ಹೇಳಿದರ ಸಾಹೇಬ್ರ |
| ಪಂ.ಸೌ.ತಜ್ಞರು | : | ಗ್ರಾಮ ಸ್ವರಾಜ್ ಯೋಜನೆಯಲ್ಲಿ ನಿಮ್ ಹಳ್ಳೀಲಿ ಏನೇನು ಕೆಲಸ ಆಗಿದೆ ರಂಗಣ್ಣ ? |
| ರಂಗಣ್ಣ | : | ಮೊದಲ ನಮ್ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು ಅದ ಸಾಹೇಬ್ರ ಇಲ್ಲಿ ನಮ್ ಹಳ್ಳಿಯಾಗ ಕುಡಿಯೋಕೆ ನೀರ್ ಸಿಗ್ತಿರ್‌ಲಿಲ್ಲ, ಮಳೆ ಬಂದ್ರಂತು ದಾರಿ ಗದ್ದೆಯಾಗಿ ಬಿಡ್ತಿದ್ದವ್ ಸಾಹೇಬ್ರ. ಮೋರಿ ನೀರ್ ರಸ್ತೆಗಾ ಹರುದು ಸೊಳ್ಳೆ ಕಥೆ ಏನ್ ಕೇಳ್ತಿರ |
| ಪಂ.ಸೌ.ತಜ್ಞರು | : | ಅಲ್ಲ ರಂಗಣ್ಣ ಈ ಯೋಜನೆಯಲ್ಲಿ ಏನೇನ್ ಕೆಲಸ ಆಗಿದವೆ ಅದನ್ನ ಹೇಳು ? |
| ರಂಗಣ್ಣ | : | ತಡ್ರಿ ಸಾಹೇಬ್ರ, ಅದ್ಯಾಕಿಂಗ ಅವಸ್ರ ಮಾಡ್ಲಿಕತ್ತಿದಿರಿ. ಹೇಳ್ತಿನಿ ಕೇಳ್ರಿ |
| ಪಂ.ಸೌ.ತಜ್ಞರು | : | ಹೇಳಿ ರಂಗಣ್ಣ |
| ರಂಗಣ್ಣ | : | ನಮ್ಮ ಓಣಿಯಾಗ ರಸ್ತೆಗೆ ಕಾಂಕ್ರೀಟ್ ಹಾಕ್ಯಾರ, ಪಕ್ಕದ ಓಣ್ಯಾಗ ಮೋರಿನ ಸಿಮೆಂಟ್‌ನಾಗ ಕಟ್ಯಾರ, ಊರಾಗ ಇಸ್ಕೂಲ್ ಬಿಲ್ಡಿಂಗ್ ಕಟ್ಯಾರ ಸಾಹೇಬ್ರ |
| ಪಂ.ಸೌ.ತಜ್ಞರು | : | ಕುಡಿಯೋಕೆ ನೀರ್ ಸಿಗ್ತಿರ್‌ಲಿಲ್ಲ ಅಂತ ಹೇಳಿದೆಯಲ್ಲ ರಂಗಣ್ಣ, ಅದರ ಬಗ್ಗೆ ಏನಾದ್ರು ಕೆಲಸ ಆಗಿದೆಯಾ? |
| ರಂಗಣ್ಣ | : | ಇಂಪಾರ್ಟೆಂಟ್ ಅದನ್ನ ಮರೆತ್ನಲ್ಲ ಸಾಹೇಬ್ರ. ಮೊದಲು ಹಳ್ಯಾಗ ಕುಡಿಯೋ ನೀರು ಇಲ್ಲ ಅಂತ ಎರಡು ಮೈಲಿ ದೂರ ಹೋಗಿ ಹೊಲ್ದಾಗ ನೀರ್ ತರ್‍ತಿದ್ವಿ ಸಾಹೇಬ್ರ. ಈಗಂತೂ ಈ ಯೋಜನೆ ಬಂದ್ ಮ್ಯಾಲ ಇಲ್ಲೇ ಊರಾಗ ಬೋರ್ ಹಾಕ್‌ಸ್ಯಾರ. ನೀರಿನ ಟ್ಯಾಂಕ್ ಕಟ್‌ಸ್ಯಾರ. ಕುಡಿಯೋ ನೀರಿಗಂತೂ ಬಾಳ ಸಲೀಸಾಗ್ಯದ ಸಾಹೇಬ್ರ. ಗ್ರಾಮ ಸ್ವರಾಜ್ ಯೋಜನೆಗಂತೂ ನಮ್ಮ ಋಣ ಅದ ಸಾಹೇಬ್ರ |
| ಪಂ.ಸೌ.ತಜ್ಞರು | : | ಈ ಎಲ್ಲಾ ಕೆಲಸಗಳು ಗ್ರಾಮ ಸ್ವರಾಜ್ ಯೋಜನೆಯಲ್ಲಿಯೇ ಆಗಿದವೆ ಅಂತಾ ನಿಮಗೆ ಹೇಗೆ ಗೊತ್ತಾಯ್ತು ರಂಗಣ್ಣ. |
| ರಂಗಣ್ಣ | : | ಗ್ರಾಮ ಪಂಚಾತ್ಯಗ ಅದೇನೋ ಜಮಾಬಂದಿ ಅಂತಾ ಮಾಡಿದ್ರು ಸಾಹೇಬ್ರ ಅಲ್ಲಿಗೆ ನಮ್ಮನ್ನು ಕರ್‌ದಿದ್ರು, ಹೋದಾಗ ಹೇಳಿದ್ರು ಸಾಹೇಬ್ರ. ಅಷ್ಟೇ ಅಲ್ಲದೇ ಪಂಚಾಯತಿ ಆಫೀಸ್ ಮುಂದ ಬೋರ್ಡ್ ಬರೆಸಿ ಕೆಲಸಗಳನ್ನು ಕೊಟ್ಟಾರ ಸಾಹೇಬ್ರ. ಆಗಲೇ ಹೇಳಿದ್ನಲ್ಲಾ ಸಾಹೇಬ್ರ ಏಳನೇ ಇಯತ್ತೆವರೆಗೆ ಕಲ್ತಿದಿನಿ ಅಂತಾ ಅಂಗಾಗಿ ಎಲ್ಲಾ ಓದಿ ತಿಳ್‌ಕೊಂಡಿದಿನಿ. |

**ಪಂ.ಸೌ.ತಜ್ಞರು** : ಗ್ರಾಮ ಸ್ವರಾಜ್ ಯೋಜನೆಯಿಂದ ಒಟ್ಟಾರೆಯಾಗಿ ನಿಮ್ಮ ಹಳ್ಳಿಗಾದ ಅನುಕೂಲ ಏನು, ಊರಿನ ಜನ ಏನಂತಾರೆ ರಂಗಣ್ಣ ?

**ರಂಗಣ್ಣ** : ಹಳ್ಳಿಗೆ ಬೇಕಾದ ಬಾಳಷ್ಟು ಕೆಲಸಗಳ್ನ ಮಾಡ್ಯಾರ, ಕೆಲಸಗಳ ಗುಣಮಟ್ಟ ಕೂಡ ಚಲೋ ಅದ, ನಮ್ಮಂತ ಹಿಂದುಳುದ ಹಳ್ಳಿಗೆ ಗ್ರಾಮ ಸ್ವರಾಜ್ ಬಂದು ಬಾಳಾ ಸಹಕಾರ ಆತು ಸಾಹೇಬ್ರ. ಸರ್ಕಾರಕ್ಕೆ ನಾವು ಥ್ಯಾಂಕ್ಸ್ ಹೇಳ್ಬೇಕು ಸಾಹೇಬ್ರ.

**ಪಂ.ಸೌ.ತಜ್ಞರು** : ಇದು ನೀವೊಬ್ಬರು ಹೇಳೋ ಮಾತೋ ಅಥವಾ ಊರಿನ ಜನ ಹೇಳೋ ಮಾತೋ ?

**ರಂಗಣ್ಣ** : ಊರ್ ಮಂದಿ ಕೂಡ ಮಾತಾಡ್ತಾರ ಸಾಹೇಬ್ರ

**ಪಂ.ಸೌ.ತಜ್ಞರು** : ಬೇರೆ ಯೋಜನೆಗಳಿಗಿಂತ ಗ್ರಾಮ ಸ್ವರಾಜ್ ಹೇಗೆ ಭಿನ್ನ ಅನ್ಸುತ್ತೆ ರಂಗಣ್ಣ ?

**ರಂಗಣ್ಣ** : ಗ್ರಾಮ ಸ್ವರಾಜ್ ಯೋಜನೆಯಲ್ಲಿ ಪ್ರದರ್ಶನ ಫಲಕಗಳನ್ನು ಹಾಕಿರೋದ್ರಿಂದ ಯೋಜನೆ ಬಗ್ಗೆ ಪ್ರತಿಯೊಬ್ಬರೂ ತಿಳ್ಕೋಬಹುದು. ಕೆಲಸಗಳನ್ನ ಟೆಂಡರ್ ಕರೆದು ಮಾಡೋದ್ರಿಂದ ಬೇಗ ಹಾಕ್ತವ ಮತ್ತು ಗುಣಮಟ್ಟ ಕೂಡ ಚೊಲೋ ಇದ ಸಾಹೇಬ್ರ

**ಪಂ.ಸೌ.ತಜ್ಞರು** : ಗ್ರಾಮ ಸ್ವರಾಜ್ ಯೋಜನೆ ಬಗ್ಗೆ ಇನ್ನು ಹೆಚ್ಚು ಏನು ಹೇಳೋಕೆ ಇಷ್ಟಪಡ್ತಿರಿ ರಂಗಣ್ಣ ?

**ರಂಗಣ್ಣ** : ವಿಶ್ವ ಬ್ಯಾಂಕ್‌ನೋರು ರಾಜ್ಯಕ್ಕೆ ಸಾಲ ಕೊಟ್ರು, ಇದರಿಂದ ಬಾಳಾ ಉಪಕಾರ ಆಗ್ಯಾದ ಸಾಹೇಬ್ರ. ಈ ಯೋಜನೇನ ಇನ್ನೂ ಮುಂದುವರೆಸಿಕೊಂಡು ಹೋದ್ರ ಊರಾಗ ಇನ್ನೂ ಬಾಳಾ ಕೆಲಸ ಆಗ್ತಾವ ಅನ್ನೋ ನಂಬಿಕೆ ಅದ ಸಾಹೇಬ್ರ.

**ಪಂ.ಸೌ.ತಜ್ಞರು** : ನಿಮ್ಮ ಹಳ್ಳೀಲಿ ಇನ್ನೂ ಏನೇನು ಕೆಲಸಗಳು ಆಗಬೇಕಾದ ಅಗತ್ಯವಿದೆ ರಂಗಣ್ಣ ?

**ರಂಗಣ್ಣ** : ಆಸ್ಪತ್ರೆ ಕಟ್ಟಡ ಆಗಬೇಕಿದೆ, ಬೀದಿ ದೀಪಗಳು ಬೇಕಿದೆ, ಕುಡಿಯೋ ನೀರಿನ ಟ್ಯಾಂಕ್ ಆಗಬೇಕಿದೆ, ತಿಪ್ಪೆಗುಂಡಿಗಳನ್ನು ತೆಗಿಬೇಕಿದೆ, ಶಾಲೆಗೆ ಕಾಂಪೌಂಡ್ ಕಟ್ಟಬೇಕಿದೆ, ಅಂಗನವಾಡಿ ಬಿಲ್ಡಿಂಗ್ ಬಿದ್ದೋಗಂಗೆ ಇರೋದ್ರಿಂದ ಕಟ್ಟಬೇಕಿದೆ, ......................................

**ಪಂ.ಸೌ.ತಜ್ಞರು** : ಸಾಕು ರಂಗಣ್ಣ ಈಗ ಸಾಕು, ಉಳಿದದ್ದನ್ನ ಸೇರಿಸಿ ಮತ್ತೊಮ್ಮೆ ನಿಮ್ಮ ವಾರ್ಡ್‌ನಲ್ಲಿ ನಡಿಯೋ ವಾರ್ಡ್/ಗ್ರಾಮ ಸಭೆಯಲ್ಲಿ ಹೇಳಿರಿ ?

**ರಂಗಣ್ಣ** : ಆಯ್ತು ಸಾಹೇಬ್ರ

**ಪಂ.ಸೌ.ತಜ್ಞರು** : ನಮ್ಮೊಂದಿಗೆ ನಿಮ್ಮ ಅನಿಸಿಕೆಗಳನ್ನು ಮುಚ್ಚುಮರೆಲ್ಲದೇ ಹಂಚಿಕೊಂಡಿದ್ದಕ್ಕೆ ಧನ್ಯವಾದಗಳು ರಂಗಣ್ಣ

**ರಂಗಣ್ಣ** : ನಿಮಗೂ ಕೂಡ ನಮಸ್ಕಾರ ಸಾಹೇಬ್ರ

* * *



# ಪ್ರಗತಿಯತ್ತ ಹೆಜ್ಜೆಗಳು

– ಟಿ. ವಿಜಯಕುಮಾರ್ *

ದಾವಣಗೆರೆ ಜಿಲ್ಲೆಯ ಅತ್ಯಂತ ಹಿಂದುಳಿದ ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ ಗ್ರಾಮ ಪಂಚಾಯತಿಯ ಯಶೋಗಾಥೆ.

ಡಾ. ಡಿ.ಎಂ. ನಂಜುಂಡಪ್ಪ ವರದಿಯನ್ನು ಆಧರಿಸಿದಂತೆ ದಾವಣಗೆರೆ ಜಿಲ್ಲೆಯ ನಮ್ಮ ಚನ್ನಗಿರಿ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕೆಂದು ಪರಿಗಣಿಸಲ್ಪಟ್ಟಿದೆ. ಈ ತಾಲ್ಲೂಕನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ವಿಶ್ವ ಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ ಗ್ರಾಮ ಸ್ವರಾಜ್ ಯೋಜನೆಯನ್ನು ಈ ತಾಲ್ಲೂಕಿನಲ್ಲಿ 2006–07ನೇ ಸಾಲಿನಿಂದಲೇ ಅನುಷ್ಠಾನಗೊಳಿಸಲಾಗುತ್ತಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ ಬರುವ ದೇವರಹಳ್ಳಿ ಗ್ರಾಮ ಪಂಚಾಯತಿಯನ್ನು ಗುರಿಯಾಗಿಟ್ಟುಕೊಂಡು ಗ್ರಾಮ ಸ್ವರಾಜ್ ಯಶೋಗಾಥೆಯನ್ನು ಈ ಕೆಳಗಿನಂತೆ ಚಿತ್ರಿಸಲಾಗಿದೆ.

ದೇವರಹಳ್ಳಿ ಗ್ರಾಮ ಪಂಚಾಯತಿಯು ಇತಿಹಾಸ ಪ್ರಸಿದ್ಧವಾಗಿದ್ದು 'ಶ್ರೀ ಉಡುಗಿರಿ ರಂಗನಾಥ ಸ್ವಾಮಿಯ' ತಾಣವಾಗಿರುತ್ತದೆ. ಈ ಪಂಚಾಯತಿ ವ್ಯಾಪ್ತಿಗೆ ದೇವರಹಳ್ಳಿ, ವಿ. ರಾಮೇನಹಳ್ಳಿ, ಕೆ. ರಾಮಗೊಂಡನಹಳ್ಳಿ, ಚಿಕ್ಕದೇವರಹಳ್ಳಿ, ಗ್ರಾಮಗಳು ಬರುತ್ತವೆ. ಈ ಗ್ರಾಮ ಪಂಚಾಯತಿಯು ಹದಿನೈದು ಸದಸ್ಯರ ಬಲವುಳ್ಳ ಗ್ರಾಮ ಪಂಚಾಯತಿ




ದೇವರಹಳ್ಳಿ ಗ್ರಾಮ ಪಂಚಾಯಿತಿ ಕಛೇರಿ ಹಳೇ ಕಟ್ಟಡ.

* ಹಿಂದಿನ ಲೆಕ್ಕ ಪತ್ರ ಸಮಾಲೋಚಕರು, ತಾ.ಸಂ.ಕೋಶ, ತಾಲ್ಲೂಕು ಪಂಚಾಯತಿ, ಚನ್ನಗಿರಿ.



ಗ್ರಾಮ ಸ್ವರಾಜ್ ಯೋಜನೆಯಡಿ ಭವ್ಯವಾಗಿ ನಿರ್ಮಾಣಗೊಳ್ಳುತ್ತಿರುವ ದೇವರಹಳ್ಳಿ ಗ್ರಾಮ ಪಂಚಾಯತಿ ಕಛೇರಿ ಕಟ್ಟಡ.

ಯಾಗಿರುತ್ತದೆ. ಈ ಗ್ರಾಮ ಪಂಚಾಯತಿಯ ಒಟ್ಟು ಜನ ಸಂಖ್ಯೆ 7065 ಇದ್ದು ಇಲ್ಲಿಗೆ 'ಜವಾಹರ್ ನವೋದಯ ವಿದ್ಯಾಲಯ ವಸತಿಯುತ ಶಾಲೆ' ಮಂಜೂರಾಗಿರುವುದು ವಿಶೇಷತೆಯಾಗಿದೆ.

ಈ ಗ್ರಾಮ ಪಂಚಾಯತಿಯಲ್ಲಿ ನಡೆದ ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಗ್ರಾಮೀಣ ಜನರು ನಿರ್ಭಯವಾಗಿ ಮತ್ತು ನಿಸ್ಸಂಕೋಚವಾಗಿ ಭಾಗವಹಿಸಿ ತಮ್ಮ ಬೇಡಿಕೆ ಹಾಗೂ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಂಡಿರುವುದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಖಾತ್ರಿಗೊಳಿಸಿದೆ. 2006–07ನೇ ಸಾಲಿನಿಂದ ಈಚೆಗಿನ ವಾರ್ಡ್ ಮತ್ತು ಗ್ರಾಮ ಸಭೆಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಸಾರ್ವಜನಿಕರಿಗೆ ಈ ಮಟ್ಟಿನ ಅರಿವು ಬರಲು ಗ್ರಾಮ ಸ್ವರಾಜ್ ಯೋಜನೆಯಡಿ ಕೈಗೊಳ್ಳಲಾದ ಅರಿವು ಕಾರ್ಯಕ್ರಮಗಳಿಂದಾಗಿ ಸಾಧ್ಯವಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ದೇವರಹಳ್ಳಿ ಗ್ರಾಮ ಪಂಚಾಯತಿಯ ಆಡಳಿತದ ಬಗ್ಗೆ ಈ ಭಾಗದ ಜನರು ಹೆಚ್ಚು ಮಾಹಿತಿ ಉಳ್ಳವರಾಗಿದ್ದಾರೆ. ಜೊತೆ ಜೊತೆಗೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಕೆಲಸಗಳಲ್ಲಿ ಕೈಜೋಡಿಸುತ್ತಿದ್ದಾರೆ.

ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ತರುವಾಯ, ದೇವರಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಸ್ಥಳೀಯ ಸಂಪನ್ಮೂಲ ಕ್ರೋಡೀಕರಣದಲ್ಲಿ ಸಾಧಿಸಲಾದ ಗಣನೀಯ ಪ್ರಗತಿಯು ಈ ಕೆಳಗಿನ ಕೋಷ್ಟಕದಲ್ಲಿ ನಿಮ್ಮ ಕಣ್ಣ ಮುಂದಿದೆ.

ರೂ. ಲಕ್ಷಗಳಲ್ಲಿ

| ಆರ್ಥಿಕ ವರ್ಷ | ತೆರಿಗೆ ಬೇಡಿಕೆ | ವಸೂಲಾತಿ | ಶೇಕಡವಾರು |
|---|---|---|---|
| 2008–09 | 58.13 | 28.37 | 48.80 |
| 2009–10 | 64.46 | 59.62 | 92.49 |
| 2010–11 | 70.04 | 65.76 | 93.88 |

ಗ್ರಾಮ ಸ್ವರಾಜ್ ಯೋಜನೆಯ ಮಾಹಿತಿ ಶಿಕ್ಷಣ ಮತ್ತು ಸಂವಹನದಡಿ ಗ್ರಾಮ ನೈರ್ಮಲ್ಯ, ಗ್ರಾಮೀಣ ಆರೋಗ್ಯ ಮತ್ತು ಕುಡಿಯುವ ನೀರಿನ ಶುದ್ಧತೆ ಬಗ್ಗೆ ವಿಷಯಧಾರಿತ ಕಲಾ ಜಾಥಗಳನ್ನು ಹಾಗೂ ಕಿರು ನಾಟಕಗಳನ್ನು ಏರ್ಪಡಿಸುವ ಮೂಲಕ ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸಲಾಗಿದೆ. ಈ ಬಗ್ಗೆ ದೇವರಹಳ್ಳಿ ಗ್ರಾಮ ಪಂಚಾಯತಿಯ ಜನರೇ ಮಾತನಾಡಿಕೊಳ್ಳುತ್ತಿರುವುದನ್ನು ನನ್ನ ಖುದ್ದು ಭೇಟಿಯಲ್ಲಿ ಗಮನಿಸಿದ್ದೇನೆ.

ಗ್ರಾಮದ ಸಮಗ್ರ ಅಭಿವೃದ್ಧಿಯಲ್ಲಿ ಶಿಕ್ಷಣವು ಸಹ ಸೇರುತ್ತದೆ. ಗ್ರಾಮ ಸ್ವರಾಜ್ ಯೋಜನೆಯು ಅನುಷ್ಠಾನ ಗೊಂಡಾಗಿನಿಂದ ಶಿಕ್ಷಣಕ್ಕೆ ಒತ್ತುಕೊಡುವ ವಿಚಾರಕ್ಕೆ ಸ್ಥಳೀಯ ಆಡಳಿತವು ಎಸ್.ಡಿ.ಎಂ.ಸಿ.ಗಳನ್ನು ರಚಿಸಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಆಗಿಂದಾಗ್ಗೆ ಪ್ರಗತಿ ಸಭೆಗಳನ್ನು ನಡೆಸಿದೆ. ಮತ್ತು ದೇವರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಶಾಲೆಗಳಿಗೆ ಅಗತ್ಯವಿದ್ದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಗ್ರಾಮ ಸ್ವರಾಜ್ ಯೋಜನೆಯ ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸುವ ಮೂಲಕ ಶೈಕ್ಷಣಿಕ ಪ್ರಗತಿಗೆ ಶ್ರಮಿಸಲಾಗಿದೆ. ಅಲ್ಲದೇ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ, ಸ್ತ್ರೀ ಶಕ್ತಿ ಸಂಘಗಳ ಸದಸ್ಯರಿಗೆ, ಎಸ್.ಡಿ.ಎಂ.ಸಿ ಗಳಿಗೆ ಯೋಜನಾ ವತಿಯಿಂದ ತರಬೇತಿಗಳನ್ನು ನೀಡಿ ಸಾಕ್ಷರತೆ ಪ್ರಮಾಣ ವೃದ್ಧಿಗೆ ಅನುವು ಮಾಡಿಕೊಡಲಾಗಿದೆ.

ಬಸ್ ತಂಗುದಾಣಗಳು, ವಾಣಿಜ್ಯ ಮಳಿಗೆಗಳು, ಗ್ರಾಮ ಪಂಚಾಯತಿ ನೂತನ ಕಟ್ಟಡ, ಶಾಲಾ ಕಾಂಪೌಂಡು, ಅಂಗನವಾಡಿ ಕೇಂದ್ರಗಳ ಕಟ್ಟಡ, ಗ್ರಾಮಗಳಲ್ಲಿ ರಸ್ತೆಗಳ ಅಭಿವೃದ್ಧಿ, ಚರಂಡಿಗಳ ನಿರ್ಮಾಣ ಕಾಮಗಾರಿಗಳು ಗ್ರಾಮ ಸ್ವರಾಜ್

ಯೋಜನೆಯಡಿ ಈ ಗ್ರಾಮ ಪಂಚಾಯತಿಯಲ್ಲಿ ಅನುಷ್ಠಾನಗೊಳಿಸಿದ ಪ್ರಮುಖ ಕಾಮಗಾರಿಗಳಾಗಿವೆ. ಈ ಎಲ್ಲಾ ಕಾಮಗಾರಿಗಳಿಂದಾಗಿ ಗ್ರಾಮೀಣ ಜನರಿಗೆ ತುಂಬಾ ಪ್ರಯೋಜನಕಾರಿಯಾಗಿರುವುದು ಗಮನಿಸಬಹುದಾಗಿದೆ.

ಗ್ರಾಮ ಸ್ವರಾಜ್‌ನ ನೇರ ಉಸ್ತುವಾರಿಯಲ್ಲಿ ಪಂಚತಂತ್ರ ಗಣಕ ತಂತ್ರಾಂಶವನ್ನು ಗ್ರಾಮ ಪಂಚಾಯತಿಯಲ್ಲಿ ಅಳವಡಿಸಿಕೊಂಡು ನಿರ್ವಹಿಸುತ್ತಿರುವುದು ಗ್ರಾಮ ಪಂಚಾಯತಿಯ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಶೀಘ್ರತೆಯನ್ನು ಕಾಯ್ದುಕೊಳ್ಳಲು ಸಹಕಾರಿಯಾಗಿದೆ.

**'ಸೇವಾ ಭದ್ರತೆ ಮತ್ತು ಪಾರದರ್ಶಕತೆ' :** ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಸ್ವರಾಜ್ ಯೋಜನೆಯು ಕೇವಲ ಒಂದು ಯೋಜನೆಯಾಗಿರದೆ, ಒಂದು ಮಾದರಿ ವ್ಯವಸ್ಥೆ ಯಾಗಿ ರೂಪುಗೊಂಡಿದೆ. ಪಂಚಾಯತಿಯಲ್ಲಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳು ಗ್ರಾಮ ಸಭೆಗಳಿಂದ ನಿರ್ಧರಿಸಲ್ಪಟ್ಟು ಆದ್ಯತೆಯ ಮೇರೆಗೆ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಗೊಳಿಸಿಕೊಳ್ಳಲಾಗಿದೆ. ಪಂ.ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಅಭಿಯಂತರರಿಂದ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಅವುಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು ದಿನ ಪತ್ರಿಕೆಗಳ



ದೇವರಹಳ್ಳಿಯಲ್ಲಿ ಬಸ್ ನಿಲ್ದಾಣದ ಬಳಿ ಗ್ರಾಮ ಸ್ವರಾಜ್ ಯೋಜನೆಯಡಿ ನಿರ್ಮಾಣಗೊಂಡಿರುವ ವಾಣಿಜ್ಯ ಮಳಿಗೆ ಕಟ್ಟಡ.



ಗ್ರಾಮ ಸ್ವರಾಜ್ ಯೋಜನೆಯಡಿ ನಿರ್ಮಾಣ ಗೊಂಡಿರುವ ದೇವರಹಳ್ಳಿ ಗ್ರಾಮದ ಬಸ್ ತಂಗುದಾಣ.

ಮೂಲಕ ಸಾರ್ವಜನಿಕ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರನ್ನು ಗುರುತಿಸುತ್ತಿರುವುದು ಕಾಮಗಾರಿಗಳ ಅನುಷ್ಠಾನದಲ್ಲಿ ಗುಣ ಮಟ್ಟ ಮತ್ತು ಶೀಘ್ರತೆಯನ್ನು ತಂದುಕೊಳ್ಳಲು ನೆರವಾಗಿದೆ.

**ಗ್ರಾಮ ಸ್ವರಾಜ್‌ನ ಮತ್ತೊಂದು ಉತ್ತಮ ಪ್ರಯೋಗ ವೆಂದರೆ :** ಪಂಚಾಯತಿಯಲ್ಲಿ ಯೋಜನೆಯಡಿ ನಡೆದ ಎಲ್ಲಾ ಪ್ರಕ್ರಿಯೆಗಳನ್ನು ಗೋಡೆ ಬರಹಗಳು ಮತ್ತು ಮಾಹಿತಿ ಫಲಕಗಳ ಮೂಲಕ ಸಾರ್ವಜನಿಕವಾಗಿ ಪ್ರದರ್ಶಿಸುತ್ತಿರುವುದರಿಂದ ಪ್ರಕ್ರಿಯೆ ಯಲ್ಲಿ ಯಾವುದೇ ಮುಚ್ಚು ಮರೆಯಿರುವುದಿಲ್ಲ.

ಗ್ರಾಮ ಸ್ವರಾಜ್ ಯೋಜನೆಯು ಗ್ರಾಮ ಪಂಚಾಯಿತಿಗಳ ಆರ್ಥಿಕ, ರಾಜಕೀಯ, ಶೈಕ್ಷಣಿಕ ಮತ್ತು ಗ್ರಾಮೀಣ ಆರೋಗ್ಯಕ್ಕೆ ಹೆಚ್ಚು ಒತ್ತು ಕೊಡುವ ಮೂಲಕ ಗ್ರಾಮೀಣ ಜನರ ಆಶಾಕಿರಣವಾಗಿರುವುದನ್ನು ನಾವು ಕಾಣಬಹುದಾಗಿರುತ್ತದೆ. ಸದರಿ ಯೋಜನೆಯು ಗ್ರಾಮೀಣಾಭಿವೃದ್ಧಿಗೆ ಅಮೂಲ್ಯವಾದ ಕೊಡುಗೆಯನ್ನು ನೀಡಿದೆ. ಯೋಜನೆಯಲ್ಲಿರುವ ಒಳ್ಳೆಯ ಅಂಶಗಳನ್ನು ನಾವು ಗಮನಿಸಿದಾಗ ಯೋಜನೆಯು ಕೇವಲ ರಾಜ್ಯದ ಕೆಲವೇ ತಾಲ್ಲೂಕುಗಳಿಗೆ ಸೀಮಿತವಾಗಿರುವುದು ದೊಡ್ಡ ನಷ್ಟವೆಂದು ನಾನು ಭಾವಿಸುತ್ತೇನೆ. ಸದರಿ ಯೋಜನೆಯನ್ನು ಜಾರಿಗೆ ತಂದ ನಮ್ಮ ಘನ ಸರ್ಕಾರಕ್ಕೆ ಮತ್ತು ಆರ್ಥಿಕ ನೆರವು ನೀಡಿದ ವಿಶ್ವ ಬ್ಯಾಂಕ್ ತಂಡಕ್ಕೂ ನಮ್ಮ ತಾಲ್ಲೂಕಿನ ಜನತೆಯ ಪರವಾಗಿ ವಿನಮ್ರ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

**ಅಂಕಿ ಅಂಶಗಳನ್ನು ಒದಗಿಸಿದವರು :** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ., ದೇವರಹಳ್ಳಿ.

❑

# ಪರಿಸರ ನಿರ್ವಹಣೆ ಮಾರ್ಗಸೂಚಿ

*(ಸೆಪ್ಟೆಂಬರ್ 2011ರ ಸಂಚಿಕೆಯಿಂದ ಮುಂದುವರೆದಿದೆ)*

## ದೋಬಿಘಾಟ್‌ಗಳ ನಿರ್ಮಾಣ ಮತ್ತು ನಿರ್ವಹಣೆ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ಸೂಕ್ತ ಸ್ಥಳ ಆಖಿಸ್ಕೆ ಮಾಡಬೇಕಾಗುತ್ತದೆ. | • ಸ್ಥಳ ಆಖಿಸ್ಕೆ ಮಾಡುವಾಗ ಕೃಷಿ ಖಿೋಗ್ಯ ಮತ್ತು ಫಲವತ್ತಾದ ಭೂಮಿ ಹೊರತುಪಡಿಸಬೇಕು. |
| • ಸಮುದಾಖಿುದ ಗುಖಿಪುಗಳಲ್ಲಿ ಭಿನ್ನಾಭಿಪ್ರಾಖಿು ಉಖಿಟಾಗಬಹುದು. | • ಸಮುದಾಖಿು ಸಹಭಾಗಿತ್ವ ತತ್ವದಖಿತೆ ಎದುರಾದ ಸಮಸ್ಯೆಗಳನ್ನು ಬರೆಹರಿಸಬೇಕು. |
| • ಮರ / ಗಿಡಗಳನ್ನು ಕತ್ತರಿಸಬೇಕಾಗಬಹುದು. | • ಕಡಿಖಿುಬೇಕಾಗಿರುವ ಮರಗಳ ಸಖಿಖ್ಯೆಖಿು ಎರಡರಷ್ಟು ಸಸಿಗಳನ್ನು ನೆಡುವ ಕಾಖಿರ್ುಕ್ರಮ ರೂಪಿಸಬೇಕು.<br>• ನೆಟ್ಟ ಸಸಿಗಳ ನಿರ್ವಹಣೆ ಅತಿ ಮುಖ್ಯ, ಅದಕ್ಕೆ ಆಖಿುವ್ಯಖಿುದಲ್ಲಿ ಅನುದಾನ ಕಲ್ಪಿಸಿರಬೇಕು.<br>• ಪಕ್ಷಿಗಳ ಗೂಡುಗಳನ್ನು ಹೊಖಿದಿರುವ ಮರಗಳಿರುವ ಸ್ಥಳಗಳನ್ನು ಆಖಿಸ್ಕೆ ಮಾಡಬಾರದು. |
| • ನೀರಿನ ಮೂಲಗಳಿಗೆ ಹಾನಿಖಿುಉಖಿಟಾಗ ಬಹುದು. | • ನೀರಿನ ಮೂಲ ಕೊಳವೆ ಬಾವಿ ಅಥವಾ ತೆರೆದ ಬಾವಿಖಿುಾಗಿದ್ದರೆ "ಸೊಟ್ ಪಿಟ್" ನೀರಿನ ಮೂಲಗಳಾದ ಕೊಳವೆ ಬಾವಿ ಅಥವಾ ತೆರೆದ ಬಾವಿಗಳಿಖಿದ 15 ಮೀಟರ್ ದೂರದಲ್ಲಿ ನಿರ್ಮಿಸಬೇಕು. |
| • ಚರಖಿಡಿ ವ್ಯವಸ್ಥೆಯಿಖಿದ ಉಖಿಟಾಗುವ ತೊಖಿದರೆಗಳು | • ಚರಖಿಡಿ ನಿರ್ಮಾಣ ಮಾಡುವಾಗ ಕೆಳಗಿನ ಅಖಿಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. - ಖಿಗೆಖಿುವ ಜಾಗದಿಖಿದ ನೀರು ನಿಲ್ಲದೆ ಸರಾಗವಾಗಿ ಹರಿಖಿುುವಖಿತಿರಬೇಕು. ನೀರು "ಸೊಟ್ ಪಿಟ್" ಗೆ ಹೋಗುವಖಿತಿರಬೇಕು. ಈ ನೀರು ಖಿುಾವುದೇ ನಿಖಿತ ಮತ್ತು ಹರಿಖಿುುವ ನೀರಿಗೆ ಸೇರಬಾರದು. |

* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಎಂ.ಎಸ್.ಐ.ಎಲ್. ಕಟ್ಟಡ, 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ನಿರ್ಮಾಣಕ್ಕೆ ಸಖಿಬಖಿಧಿಸಿದ ತ್ಯಾಜ್ಯ ವಿಲೇವಾರಿ | • ನಿರ್ಮಾಣದಿಖಿದ ಬರುವ ತ್ಯಾಜ್ಯವನ್ನು ಸ್ಥಳದಲ್ಲಿಖಿಯೇ ಬಿಡದೇ ಸೂಕ್ತ ರೀತಿಖಿಯಲ್ಲಿ ವಿಲೇವಾರಿ ಮಾಡಬೇಕು. |
| • ಬಾಲ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು. | • ನಿರ್ಮಾಣ ಚಟುವಟಿಕೆಗೆ ಬಾಲ ಕಾರ್ಮಿಕರ ಸೇವೆ ಪಡೆಖಿಯಬಾರದು. |
| • ಚರಖಿಡಿಗಳು ಕಟ್ಟಿಕೊಖಿಡು ನೀರಿನ ಹರಿಖಿಯುವಿಕೆ ಅಡಚಣೆ ಉಖಿಟಾಗಬಹುದು. | • ಕ್ರಮವಾಗಿ ಸ್ವಚ್ಛ ಮಾಡುತ್ತಿರಬೇಕು, ಅದಕ್ಕೆ ತಗಲುವ ಪೂರಕ ವೆಚ್ಚಕ್ಕೆ ಆಖಿಯವ್ಯಖಿಯದಲ್ಲಿ ಅವಕಾಶ ಕಲ್ಪಿಸಬೇಕು. ಕಸ-ಕಡ್ಡಿ, ಪ್ಲಾಸ್ಟಿಕ್ ಮುಖಿತಾದ ವಸ್ತುಗಳನ್ನು ಚರಖಿಡಿಗೆ ಹಾಕದಿರುವಖಿತೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಬೇಕು. |

## ಪಶುಪಾಲನೆ ಮತ್ತು ಕೋಳಿ ಸಾಕಣಿಕೆ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ಪಶು ಸಂಗೋಪನೆ ಚಟುವಟಿಕೆಗಳಿಂದ ಉತ್ಪತ್ತಿಯಾಗುವ ಸಗಣಿ, ಹಿಕ್ಕೆ, ಮೂತ್ರ ಮುಂತಾದ ತ್ಯಾಜ್ಯಗಳಿಂದ ಭೂಮಿ ಮತ್ತು ನೀರು ಕಲುಶಿತವಾಗುವುದು. | • ಉತ್ಪತ್ತಿಯಾಗುವ ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು.<br>ಸುಧಾರಿತ ನಿರ್ವಹಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು.<br>ತಿಪ್ಪೆ ಗುಂಡಿಗಳು ಊರಿನಿಂದ 200 ಮೀಟರ್ ದೂರವಿರಬೇಕು.<br>ಈ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಬೇಕು. |
| • ಅಶುದ್ಧ ಹಾಲಿನ ಉತ್ಪಾದನೆ | • ಸ್ವಚ್ಛತೆಗೆ ಆದ್ಯತೆ ನೀಡಿ, ಉತ್ತಮ ಗುಣಮಟ್ಟದ ಹಾಲು ಉತ್ಪಾದನೆ ಕ್ರಮಗಳನ್ನು ಅನುಸರಿಸಬೇಕು. |
| • ಕೋಳಿಸಾಕಾಣಿಕೆಯಿಂದ ಬರುವ ತ್ಯಾಜ್ಯ (ಹಿಕ್ಕೆ) ವಿಲೇವಾರಿ | • ಕೋಳಿ ಸಾಕಾಣಿಕೆಯಿಂದ ಬರುವ ತ್ಯಾಜ್ಯವನ್ನು ಕ್ರಮಬದ್ಧವಾಗಿ ವಿಲೇವಾರಿ ಮಾಡುವ ವ್ಯವಸ್ಥೆ ಮಾಡಿಕೊಂಡಿರಬೇಕು. |

ಮೇಲ್ಕಖಿಡಖಿತೆ ತಿಳಿಸಿರುವಖಿತೆ ಗ್ರಾಮ ಪಖಿಚಾಖಿಯತಿ ತೆಗೆದುಕೊಳ್ಳುವ ಕಾಮಗಾರಿ/ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಖಿದರ್ಭದಲ್ಲಿ ಪರಿಸರ ನಿರ್ವಹಣೆಖಿಯ ಮಾರ್ಗಸೂಚಿಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಗ್ರಾಮ ಪಖಿಚಾಖಿಯತಿಖಿಯ ಎಲ್ಲಾ ಅನುಷ್ಠಾನಾಧಿಕಾರಿಗಳದ್ದಾಗಿರುತ್ತದೆ.

*(ಮುಂದುವರೆಯುತ್ತದೆ)*

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 250 ಗ್ರಾಪಂಅ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ : 22–09–2011

## ಸುತ್ತೋಲೆ

**ವಿಷಯ :** ಗ್ರಾಮ ಸಭೆಗಳನ್ನು ವಿಡಿಯೋ ಚಿತ್ರೀಕರಣ ಮಾಡುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಸುತ್ತೋಲೆ ಸಂಖ್ಯೆ : ಆರ್.ಡಿ.ಪಿ. 220 ಜಿಪಿಎ 2001, ದಿನಾಂಕ : 10–10–2001.

2. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 474 ಗ್ರಾಪಂಅ 2005 ದಿನಾಂಕ : 09–11–2005.

* * *

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 3 ಮತ್ತು 3–ಎ ರಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಠ 6 ತಿಂಗಳಿಗೆ ಒಂದು ಬಾರಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ನಡೆಸಲು ನಿರ್ದೇಶಿಸಲಾಗಿದೆ. ಮತ್ತು ಸದರಿ ಸಭೆಗಳಲ್ಲಿ ಚರ್ಚಿಸಬೇಕಾದ ಪ್ರಕಾರ್ಯಗಳನ್ನು ವಿವರಿಸಲಾಗಿದೆ. ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆಗಳನ್ನು ನಡೆಸುವುದಕ್ಕೆ ಸ್ಪಷ್ಟವಾದ ಮಾರ್ಗದರ್ಶಿ ಸೂತ್ರಗಳನ್ನು ಸಂಖ್ಯೆ : ಆರ್.ಡಿ.ಪಿ. 220 ಜಿಪಿಎ 2001, ದಿನಾಂಕ : 10–10–2001 ರಂದು ಸುತ್ತೋಲೆ ಹೊರಡಿಸಿ ಸೂಚಿಸಲಾಗಿದೆ. ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ (ವಾರ್ಡ್ ಸಭೆ ಮತ್ತು ಗ್ರಾಮ ಸಭೆ) ನಿಯಮಗಳು, 2004 ರಲ್ಲಿ ಸಭೆಯನ್ನು ನಡೆಸುವ ಕುರಿತಂತೆ ವಿವರವಾಗಿ ನಿರ್ದೇಶನಗಳನ್ನು ನೀಡಿದೆ.

ಗ್ರಾಮಗಳ ಅಭಿವೃದ್ಧಿ, ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಮುಂತಾದ ಎಲ್ಲಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಸಭೆಗಳನ್ನು ನಡೆಸುವುದು ಕಡ್ಡಾಯಗೊಳಿಸಲಾಗಿದೆ. ಆದರೂ ಸಹ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳು ಈ ಮೇಲೆ ತಿಳಿಸಿರುವ ನಿಯಮ ಹಾಗೂ ಮಾರ್ಗದರ್ಶನಗಳನ್ನು ಸಮರ್ಪಕವಾಗಿ ಪಾಲಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆಗಳು ನಡೆಯದಿರುವುದು, ನಡೆದರೂ ಕೂಡಾ ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಅಸಮರ್ಪಕ ಹಾಜರಿ ಅಥವಾ ಗೈರು ಹಾಜರಿಯಲ್ಲಿ ನಡೆಯುತ್ತಿದ್ದು, ಸರಿಯಾದ ರೀತಿಯಲ್ಲಿ ನಡೆಯದೆ ಇರುವುದು ಮುಂತಾದ ನ್ಯೂನತೆಗಳು ಕಂಡು ಬರುತ್ತಿವೆ.

ಗ್ರಾಮ ಸಭೆಗಳನ್ನು ಸಮರ್ಪಕವಾದ ರೀತಿಯಲ್ಲಿ ನಡೆಸದಿರುವ ಬಗ್ಗೆ ದಿನಾಂಕ : 21–09–2011 ರಂದು ನಡೆದ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಸಭೆಯಲ್ಲಿ ಹಲವಾರು ಸದಸ್ಯರು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳ ಸಮಗ್ರ ಹಾಗೂ ಪರಿಣಾಮಕಾರಿ ಅಭಿವೃದ್ಧಿಯನ್ನು ನೆರವೇರಿಸಲು ಗ್ರಾಮ ಸಭೆಗಳು ಸಮಂಜಸವಾಗಿ ನಡೆಯುವುದು ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ನಡೆಸಲಾಗುವ ಗ್ರಾಮ ಸಭೆಗಳು ಸರಿಯಾಗಿ ನಡೆಯುತ್ತಿವೆ ಎಂಬುದನ್ನು ದೃಢಪಡಿಸಲು ಗ್ರಾಮ ಸಭೆಗಳ ದೃಶ್ಯ ಚಿತ್ರಿಕರಣ (Video Recording) ಮಾಡುವುದು ಅವಶ್ಯಕವಾಗಿದ್ದು, ಈಗಾಗಲೇ ಸರ್ಕಾರವು ದಿನಾಂಕ : 9–11–2005 ರ ಸುತ್ತೋಲೆಯಲ್ಲಿ ಗ್ರಾಮ ಸಭೆಯ ಕಲಾಪಗಳನ್ನು ವಿಡಿಯೋ ಚಿತ್ರಿಕರಿಸುವ ಬಗ್ಗೆ ಸೂಚಿಸಲಾಗಿದೆ.

ಆದರೆ ಸದರಿ ಸುತ್ತೋಲೆಯಲ್ಲಿನ ಸೂಚನೆಯನ್ನು ಹಲವಾರು ಗ್ರಾಮ ಪಂಚಾಯತಿಗಳು ಸರಿಯಾಗಿ ಪಾಲಿಸದಿರುವುದು ಮತ್ತು ಅದರಲ್ಲಿನ ನಿಬಂಧನೆಗಳನ್ನು ಅನುಸರಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ನಡೆಸಲಾಗುವ ಗ್ರಾಮ ಸಭೆಗಳ ಕಲಾಪವನ್ನು ವಿಡಿಯೋ ಚಿತ್ರಿಕರಿಸುವುದನ್ನು ಕಡ್ಡಾಯಗೊಳಿಸಿ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

1) ಎಲ್ಲಾ ಗ್ರಾಮ ಸಭೆಗಳ ಕಲಾಪವನ್ನು ವಿಡಿಯೋ ಚಿತ್ರೀಕರಿಸಿ ಅದನ್ನು ಸಿ.ಡಿ.ಗಳಲ್ಲಿ ಮುದ್ರಿಸಿ ಅವುಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಲ್ಲಿ ಸುರಕ್ಷಿತವಾಗಿ ಹಾಗೂ ಕ್ರಮಬದ್ಧವಾಗಿ ಇಡುವುದು.

2) ವಿಡಿಯೋ ಚಿತ್ರೀಕರಣವನ್ನು ಯಾವುದೇ ಸಂದರ್ಭದಲ್ಲಾಗಲೀ ಮುಂದೂಡತಕ್ಕದಲ್ಲ.

3) ಗ್ರಾಮ ಸಭೆಯ ಸಂಪೂರ್ಣ ಕಲಾಪವನ್ನು ಚಿತ್ರೀಕರಿಸತಕ್ಕದು.

4) ಕೆಲ ಭಾಗವನ್ನು ಚಿತ್ರೀಕರಿಸಿ ಸಂದರ್ಭೋಚಿತವಲ್ಲವೆಂಬ ಕಾರಣ ನೀಡಿ ಉಳಿದ ಭಾಗವನ್ನು ಚಿತ್ರೀಕರಣ ಮಾಡದೆ ಇರತಕ್ಕದಲ್ಲ.

5) ಸದರಿ ಚಿತ್ರೀಕರಣದಲ್ಲಿ ಗ್ರಾಮ ಸಭೆಯು ಜರುಗಿದ ದಿನಾಂಕ, ತಿಂಗಳು ಮತ್ತು ವರ್ಷದ ಬಗ್ಗೆ ಮಾಹಿತಿ ದಾಖಲಾಗಿರತಕ್ಕದು.

6) ಸರ್ಕಾರವು ಅಪೇಕ್ಷಿಸಿದಾಗ ಚಿತ್ರೀಕರಣದ ಸಿ.ಡಿ. ಯನ್ನು ಸರ್ಕಾರಕ್ಕೆ ಒದಗಿಸತಕ್ಕದು.

7) ಗ್ರಾಮ ಸಭೆ ನಡೆದ ಒಂದು ತಿಂಗಳೊಳಗಾಗಿ ಈ ಚಿತ್ರೀಕರಣವನ್ನು ಗ್ರಾಮ ಪಂಚಾಯಿತಿಯ ವೆಬ್‌ಸೈಟ್/ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸತಕ್ಕದ್ದು.

8) ವಿಡಿಯೋ ಚಿತ್ರೀಕರಣದ ಬಾಬ್ತಿಗಾಗಿ ಒಂದು ಗ್ರಾಮ ಸಭೆಗೆ ಗರಿಷ್ಠ ₹. 2500/– ಗಳ ಮಿತಿಗೊಳಪಟ್ಟು ವೆಚ್ಚ ಭರಿಸತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಗ್ರಾಮ ಪಂಚಾಯಿತಿ ನಿಧಿಯಿಂದ ಭರಿಸತಕ್ಕದ್ದು.

9) ಸಾರ್ವಜನಿಕರು ಈ ಸಿ.ಡಿ. ಮುದ್ರಣವನ್ನು ಅಪೇಕ್ಷಿಸಿದರೆ ಪ್ರತಿ ಸಿ.ಡಿ.ಗೆ ₹. 100/– ರಂತೆ ಬೆಲೆ ನಿಗದಿಪಡಿಸಿ ಒದಗಿಸತಕ್ಕದ್ದು.

ಜಿಲ್ಲಾ ಪಂಚಾಯತ್ ವತಿಯಿಂದ ಪ್ರತಿಯೊಂದು ಗ್ರಾಮ ಸಭೆಗೆ ಜಿಲ್ಲಾ ಪಂಚಾಯಿತಿ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಒಳಗೊಂಡಂತೆ), ತಾಲ್ಲೂಕು ಪಂಚಾಯಿತಿ ಮಟ್ಟದ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಗ್ರಾಮ ಸಭೆಗಳು ಸುಸೂತ್ರವಾಗಿ ನಡೆಸಲು ಕ್ರಮ ವಹಿಸತಕ್ಕದ್ದು.

ಈ ಸುತ್ತೋಲೆಯಲ್ಲಿನ ಸೂಚನೆಯಂತೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ. ತಪ್ಪಿದಲ್ಲಿ ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳೇ ನೇರವಾಗಿ ಹೊಣೆಗಾರರಾಗುತ್ತಾರೆಂದು ತಿಳಿಸಿದೆ.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2010–11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ :** ಕೇಂದ್ರ ಸರ್ಕಾರದ ಆದೇಶ ಸಂಖ್ಯೆ : w-110023/15/2009-CRSP, ದಿನಾಂಕ : 28.06–2011

* * *

## ಪ್ರಸ್ತಾವನೆ

ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2011–12ನೇ ಸಾಲಿಗೆ ಕೇಂದ್ರ ಸರ್ಕಾರವು ತಮ್ಮ ಪಾಲಿನ ಅನುದಾನದ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಜಿಲ್ಲೆಗಳವರು ಲಭ್ಯವಿರುವ ಒಟ್ಟು ಅನುದಾನದಲ್ಲಿ ಶೇ. 60ರಷ್ಟು ಹಣವನ್ನು ಖರ್ಚು ಮಾಡಿ ಹಣ ಬಳಕೆ ಪ್ರಮಾಣ ಪತ್ರ. ಆಡಿಟ್ ವರದಿಗಳನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಿರುತ್ತದೆ. ಜಿಲ್ಲೆಗಳಿಂದ ನೀಡಲಾಗಿರುವ ಹಣಬಳಕೆ ಪ್ರಮಾಣ ಪತ್ರ ಹಾಗೂ ಜಿಲ್ಲೆಗಳಲ್ಲಿ ಕಾರ್ಯಕ್ರಮದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಗಮನದಲ್ಲಿಟ್ಟು ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುತ್ತದೆ. ಅದರಂತೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಜಿಲ್ಲೆಗಳಿಗೆ ಮರು ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಆದೇಶ

## ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ/ ರಾನೀನೈಮಿ/ ಸಂಸ್ವಆಂ/ 120/ 09/ 2011-12. ದಿನಾಂಕ 08-08-2011

ಪ್ರಸ್ತಾವನೆಯಲ್ಲಿ ತಿಳಿಸಲಾಗಿರುವ ಅಂಶಗಳನ್ನು ಪರಿಗಣಿಸಿ 2010–11ನೇ ಆರ್ಥಿಕ ಸಾಲಿಗೆ ಕೇಂದ್ರ ಸರ್ಕಾರದ ಅನುದಾನದಲ್ಲಿ ಜಿಲ್ಲೆಗಳಿಗೆ ಷರತ್ತುಗೊಳಪಟ್ಟು ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಿದೆ.

| ಕ್ರ.ಸಂ. | ಜಿಲ್ಲೆಗಳ ಹೆಸರು | ಬಿಡುಗಡೆ ಮಾಡಲು ಉದ್ದೇಶಿಸಿರುವ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1. | ಬಾಗಲಕೋಟೆ | 192.95 |
| 2. | ಬೆಂಗಳೂರು (ಗ್ರಾ) | 31.17 |
| 3. | ಬೆಂಗಳೂರು (ನ) | 101.10 |
| 4. | ಬೆಳಗಾಂ | 353.20 |
| 5. | ಬಳ್ಳಾರಿ | 198.58 |
| 6. | ಬೀದರ್ | 114.14 |
| 7. | ಬಿಜಾಪುರ | 245.05 |
| 8. | ಚಾಮರಾಜನಗರ | 250.05 |
| 9. | ಚಿಕ್ಕಮಗಳೂರು | 169.52 |
| 10. | ಚಿತ್ರದುರ್ಗ | 182.05 |
| 11. | ದಾವಣಗೆರೆ | 189.56 |
| 12. | ಧಾರವಾಡ | 138.23 |

| | | |
|---|---|---|
| 13. | ಗದಗ | 98.18 |
| 14. | ಹಾಸನ | 100.98 |
| 15. | ಹಾವೇರಿ | 211.10 |
| 16. | ಕೊಡಗು | 53.63 |
| 17. | ಕೋಲಾರ | 87.75 |
| 18. | ಕೊಪ್ಪಳ | 136.55 |
| 19. | ಮಂಡ್ಯ | 149.84 |
| 20. | ಮಂಗಳೂರು (ದ.ಕ.) | 01.44 |
| 21. | ಮೈಸೂರು | 178.03 |
| 22. | ಶಿವಮೊಗ್ಗ | 66.83 |
| 23. | ಉಡುಪಿ | 38.76 |
| 24. | ಉತ್ತರ ಕನ್ನಡ (ಕಾರವಾರ) | 135.85 |
| | ಒಟ್ಟು | **3427.54** |

**(ರೂ. ಮೂರು ಸಾವಿರದ ನಾಲ್ಕುನೂರ ಇಪ್ಪತ್ತೇಳು ಲಕ್ಷಗಳು ಮತ್ತು ಐವತ್ನಾಲ್ಕು ಸಾವಿರಗಳು ಮಾತ್ರ)**

1. ಈ ಅನುದಾನವನ್ನು ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯ ಮಾರ್ಗಸೂಚಿಗಳು ಮತ್ತು ಕೇಂದ್ರ ಸರ್ಕಾರದಿಂದ ಯೋಜನಾ ಘಟಕಾಂಶಗಳಿಗೆ ಮಂಜೂರಾತಿ ದೊರೆತಿರುವ ಮಿತಿಯೊಳಗೆ ವೆಚ್ಚ ಮಾಡತಕ್ಕದ್ದು. ಈ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ಹೊರಡಿಸಲಾಗುವ ಆದೇಶ/ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

2. ಬಿಡುಗಡೆ ಮಾಡಲು ಉದ್ದೇಶಿಸಿರುವ ಅನುದಾನವನ್ನು ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯ ನಿಮ್ಮ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಬಿಡುಗಡೆಗೊಳಿಸಲಾಗಿದೆ.

3. ಈಗ ಬಿಡುಗಡೆ ಮಾಡಿರುವ ಅನುದಾನದಲ್ಲಿ ಶೇ. 60 ಬಳಕೆಯ ತಕ್ಷಣವೇ ಹಣ ಬಳಕೆ ಪ್ರಮಾಣ ಪತ್ರವನ್ನು ಹಾಗೂ ಆಡಿಟ್ ವರದಿಗಳನ್ನುಈ ಕಛೇರಿಗೆ ಸಲ್ಲಿಸುವುದು. ಅವುಗಳನ್ನು ಪಡೆದ ನಂತರವೇ ಕೇಂದ್ರದ/ ರಾಜ್ಯದ ಅನುದಾನಗಳ ಬಾಕಿ ಹಣವನ್ನು ಬಿಡುಗಡೆ ಮಾಡಲು ಕ್ರಮವ ವಹಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ನಂ. ಗ್ರಾಅಪ/83/ಗ್ರಾಪಂಕಾ/2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 07–09–2011

## ಸುತ್ತೋಲೆ

**ವಿಷಯ :** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ನಿಯೋಜನೆ/ಅನ್ಯ ಕಾರ್ಯನಿಮಿತ್ತದ ಆಧಾರದ ಮೇಲೆ ನೇಮಿಸುತ್ತಿರುವ ಬಗ್ಗೆ.

**ಉಲ್ಲೇಖ :** 1. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ/338/ಗ್ರಾಪಂಕಾ/2010, ದಿನಾಂಕ : 14–12–2010.

2. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 83 ಗ್ರಾಪಂಕಾ 2011, ದಿನಾಂಕ : 7–6–2011.

* * *

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಹಂತದಲ್ಲಿ ವರ್ಗಾವಣಾ ನೀತಿಗಳನ್ನು ಉಲ್ಲಂಘಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ನಿಯೋಜನೆ ಹೆಸರಿನಲ್ಲಿ ಪರೋಕ್ಷವಾಗಿ ವರ್ಗಾವಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಹಾಗೂ ಇದನ್ನೇ ಆಧಾರವಾಗಿಟ್ಟುಕೊಂಡು ಹಲವಾರು ನೌಕರರ ನಿಯೋಜನೆಗಾಗಿ ಸರ್ಕಾರದ ಹಂತದಲ್ಲಿ ಸಹ ಮನವಿಗಳು ಒತ್ತಡಗಳು ಬಂದ ಹಿನ್ನೆಲೆಯಲ್ಲಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಹಂತದಲ್ಲಿ ನಿಯೋಜನೆ ಮಾಡುತ್ತಿರುವುದನ್ನು ರದ್ದುಪಡಿಸಲು ದಿನಾಂಕ : 7–6–2011ರ ಸುತ್ತೋಲೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಹೀಗಿದ್ದರೂ ಸಹ ಸ್ಥಳೀಯ ಒತ್ತಡ, ನೌಕರರ ಕೋರಿಕೆ, ಇತ್ಯಾದಿ ನೆಪಗಳ ಆಧಾರದ ಮೇಲೆ ಈ ನಿಯೋಜನೆಗಳನ್ನು ಇಂದಿಗೂ ಮುಂದುವರೆಸುತ್ತಿರುವುದು ಹಾಗೂ ಹೊಸದಾಗಿ ನಿಯೋಜನೆಗಳನ್ನು ಮಾಡುತ್ತಿರುವುದು ನಡೆಯುತ್ತಲೇ ಇರುತ್ತದೆ.

ಮೈಸೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವಾರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿಯೋಜನೆಯ ಮೇಲೆ ತಾಲ್ಲೂಕು ಪಂಚಾಯಿತಿಯಲ್ಲಿ ಸಿಬ್ಬಂದಿ ವಿಷಯ ನಿರ್ವಾಹಕರಾಗಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವಿಷಯ ನಿರ್ವಾಹಕರಾಗಿ ಕೆಳ ಹಂತದ ಹುದ್ದೆಗಳಲ್ಲೂ ಸಹ ಕರ್ತವ್ಯ ನಿರ್ವಹಿಸುತ್ತಿದ್ದು, ಸರ್ಕಾರದ ಸುತ್ತೋಲೆಯಂತೆಯೇ ಇವರುಗಳ ನಿಯೋಜನೆಯನ್ನು ರದ್ದುಪಡಿಸಿ ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದ್ದು, ಇವರುಗಳು ತಮ್ಮ ಮೂಲ ಸ್ಥಾನಕ್ಕೆ ಹಿಂತಿರುಗಿ ಹೋಗುವ ಬದಲು ನಿಯೋಜಿತ ಹುದ್ದೆಗಳಲ್ಲಿಯೇ ಮುಂದುವರೆಯಲು ಸ್ಥಳೀಯ ಜನಪ್ರತಿನಿಧಿಗಳು, ಶಾಸಕರುಗಳು ಮತ್ತು ಸರ್ಕಾರದಿಂದ ಒತ್ತಡ ತಂದು ಮುಂದುವರೆಯಲು ಪ್ರಯತ್ನಿಸುತ್ತಿರುತ್ತಾರೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು, ಇವರು ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

ದಿನಾಂಕ : 7–6–2011 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ನಿಯೋಜನೆಯನ್ನು ರದ್ದುಪಡಿಸಿ ದಿನಾಂಕ : 30–6–2011 ರೊಳಗೆ ಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿದ್ದು, ಹಲವಾರು ಜಿಲ್ಲಾ ಪಂಚಾಯಿತಿಗಳಲ್ಲಿ ಈ ಸುತ್ತೋಲೆಯ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದು ಕಂಡುಬರುತ್ತಿಲ್ಲ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಸೃಜಿಸಲಾಗಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಲು ನೇಮಿಸಿಕೊಂಡಿರುವುದರಿಂದ ಅವರು ಕರ್ತವ್ಯ ನಿರ್ವಹಿಸಲು ಇಚ್ಛೆಪಡುವುದಿಲ್ಲವೆಂಬ ಅಥವಾ ಅಸಮರ್ಥರೆಂಬ ಅಥವಾ ವೈದ್ಯಕೀಯ ಕಾರಣ, ಇತ್ಯಾದಿ ಕಾರಣಗಳ ನೆಪವೊಡ್ಡಿ ಗುಂಪುಗಾರಿಕೆ ಮಾಡಿ ನಿಯೋಜನೆಯ ಹುದ್ದೆಗಳಲ್ಲಿ ಸ್ಥಳೀಯರ ಒತ್ತಡ ತಂದು ಮುಂದುವರೆಯುವ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ನಿರಾಕರಿಸುವ ಮತ್ತು ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಅಸಮರ್ಥರೆಂದು ಕಂಡು ಬಂದಲ್ಲಿ ಈ ನೌಕರರು ಪರೀಕ್ಷಾರ್ಥ ಅವಧಿಯಲ್ಲಿ ಇರುವುದರಿಂದ ಅವರುಗಳನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ ಅವಧಿ) ನಿಯಮಗಳು, 1977ರ ಅನುಸಾರ ಸೇವೆಯಿಂದ ತೆಗೆದು ಹಾಕಲು ಅವಕಾಶವಿರುತ್ತದೆ. ಆದುದರಿಂದ ಇಂತಹ ಪ್ರಕರಣಗಳಲ್ಲಿ ಕಟ್ಟುನಿಟ್ಟಾಗಿ ಸದರಿ ನಿಯಮಗಳಂತೆ ಕ್ರಮ ವಹಿಸಲು ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ರಾಜೀನಾಮೆ ಸಲ್ಲಿಸುವ ನೌಕರರ ರಾಜೀನಾಮೆಯನ್ನು ಮತ್ತು ಮಾತೃ ಇಲಾಖೆಗೆ ಹಿಂದಿರುಗಲು ಇಚ್ಛಿಸುವ ನೌಕರರುಗಳ ಕೋರಿಕೆಯನ್ನು ಕೂಡಲೇ ಅಂಗೀಕರಿಸಿ ಬಿಡುಗಡೆಗೊಳಿಸಲು ಸಹ ಕ್ರಮ ಕೈಕೊಳ್ಳುವಂತೆ ಎಲ್ಲಾ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

ದಿನಾಂಕ : 7–6–2011 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ನಿಯೋಜನೆಗಳನ್ನು ರದ್ದುಪಡಿಸಿ ದಿನಾಂಕ : 30–6–2011 ರೊಳಗೆ ಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿದ್ದು, ಹಲವಾರು ಜಿಲ್ಲಾ ಪಂಚಾಯಿತಿಗಳಲ್ಲಿ ಈ ಸುತ್ತೋಲೆಯ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದು ಕಂಡು ಬರುತ್ತಿಲ್ಲ. ಆದುದರಿಂದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇಂತಹ ಎಲ್ಲಾ ನಿಯೋಜನೆ/ಅನ್ಯ ಕಾರ್ಯನಿಮಿತ್ತದ ಆಧಾರದ ಮೇಲೆ ಮಾಡಿರುವ ನೇಮಕಾತಿಗಳನ್ನು ಕೂಡಲೇ ರದ್ದುಗೊಳಿಸಿ ಈ ಸುತ್ತೋಲೆಗೆ ನಮೂದಿಸಿರುವ ನಮೂನೆಯಲ್ಲಿ ದಿನಾಂಕ : 20–09–2011 ರೊಳಗೆ ಸರ್ಕಾರಕ್ಕೆ ಮಾಹಿತಿ ಸಲ್ಲಿಸಲು ಸೂಚಿಸಿದೆ.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ನಮೂನೆ

| ಜಿಲ್ಲಾ ಪಂಚಾಯಿತಿ ಹೆಸರು | ನಿಯೋಜನೆ/ಅನ್ಯ ಸೇವೆ ಮೇಲೆ ಮಾಡಲಾಗಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹೆಸರು ಮತ್ತು ವಿವರ | ನಿಯೋಜನೆ/ಅನ್ಯ ಸೇವೆ ಆಧಾರದ ಮೇಲೆ ನೇಮಕ ಮಾಡಲಾದ ದಿನಾಂಕ | ನಿಯೋಜನೆ/ಅನ್ಯ ಸೇವೆ ಆಧಾರದ ಮೇಲೆ ಮೇಲೆ ನೇಮಕಾತಿಯನ್ನು ರದ್ದುಪಡಿಸಲಾದ ದಿನಾಂಕ | ರದ್ದುಪಡಿಸದಿದ್ದಲ್ಲಿ ಸಂಬಂಧಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲೆ ಏಕೆ ಶಿಸ್ತು ಕ್ರಮ ಜರುಗಿಸಬಾರದು ಎಂಬ ಬಗ್ಗೆ ಸಮಜಾಯಿಷಿ. |
|---|---|---|---|---|
| | | | | |

## ಕರ್ನಾಟಕ ಸರ್ಕಾರ

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ : ಗ್ರಾಅಪ 110(ಎ) ಗ್ರಾಸ್ವಯೋ 2011–12

ಗ್ರಾಮ ಸ್ವರಾಜ್ ಯೋಜನಾ ಕಛೇರಿ
# 36, 6ನೇ ಮಹಡಿ, ಎಂ.ಎಸ್.ಐ.ಎಲ್. ಕಟ್ಟಡ
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–52
ದಿನಾಂಕ : 24.9.2011

ಗೆ,
ಮುಖ್ಯ ಕಾರ್ಯನಿರ್ವಾಯಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ.

ಮಾನ್ಯರೇ,

**ವಿಷಯ** : 2011–12ನೇ ಸಾಲಿಗೆ ಗ್ರಾಮ ಪಂಚಾಯಿತಿಗಳಲ್ಲಿ ದ್ವಿನಮೂನೆ ಲೆಕ್ಕ ಪತ್ರ ನಿರ್ವಹಣೆಗೆ ಚಾರ್ಟರ್ಡ್ ಅಕೌಂಟೆಂಟ್‌ಗಳ ಸೇವೆಯನ್ನು ನವೀಕರಿಸುವ/ಹೊಸದಾಗಿ ನೇಮಿಸುವ ಕುರಿತು.

**ಉಲ್ಲೇಖ** : 1. ಸ.ಕಾ, ಗ್ರಾ.ಅ.ಪಂ. ಇಲಾಖೆ ಇವರ ಪತ್ರ : ಗ್ರಾ.ಅಪ. 110 ಗ್ರಾಸ್ವಯೋ 2007/20.7.2007.

2. World Bank - The Eight Implementation Mission on August, 16.22, 2011

* * *

ರಾಜ್ಯದ 176 ತಾಲ್ಲೂಕುಗಳಲ್ಲಿರುವ ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳನ್ನು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಲೆಕ್ಕ ಪತ್ರ ಮತ್ತು ಆಯವ್ಯಯ) ನಿಯಮಗಳು 2006ರ ಪ್ರಕಾರ ನಿರ್ವಹಿಸಲು 2007–08 ರಿಂದ 2010–11ನೇ ಸಾಲಿಗೆ ಬಾಹ್ಯ ಮೂಲಗಳಿಂದ ಚಾರ್ಟರ್ಡ್ ಅಕೌಂಟೆಂಟ್‌ಗಳ ಸೇವೆಯನ್ನು ಪಡೆಯಲಾಗುತ್ತಿದೆ. ಪ್ರಸ್ತುತ 2011–12ನೇ ಸಾಲಿನಲ್ಲಿಯೂ ಸಹ ಹಿಂದಿನ ಸಾಲಿನಂತೆಯೇ ಲೆಕ್ಕಪತ್ರ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಚಾರ್ಟರ್ಡ್ ಅಕೌಂಟೆಂಟ್ ಫರ್ಮುಗಳಿಗೆ ನೀಡಿ ಮುಂದುವರೆಸುವುದು.

ಇದಲ್ಲದೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳು ಸ್ವ–ಸಾಮರ್ಥ್ಯದಿಂದ ದ್ವಿ–ನಮೂನೆಯಲ್ಲಿ ಲೆಕ್ಕ ಪತ್ರ ನಿರ್ವಹಿಸುವಂತೆ ಹಾಗೂ ಪಂಚತಂತ್ರ ತಂತ್ರಾಂಶದಲ್ಲಿಯು ಸಹ ಲೆಕ್ಕ ಮತ್ತು ಇತರೆ ವಿವರಗಳನ್ನು ಕಂಪ್ಯೂಟರ್‌ನಲ್ಲಿ ಅಳವಡಿಸುವಂತೆ/ನಿರ್ವಹಿಸುವಂತೆ ತರಬೇತಿ ನೀಡಲು ಕ್ರಮಕೈಗೊಳ್ಳವುದು. ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಕಾಲಕಾಲಕ್ಕೆ ಸಭೆಯನ್ನು ಕರೆದು ಪ್ರಗತಿ ಪರಿಶೀಲನೆ ಮಾಡುವುದರ ಮೂಲಕ ನೋಡಲ್ ಅಧಿಕಾರಿಯನ್ನು ನೇಮಿಸಿ ಆಗಿಂದಾಗ್ಗೆ ಮೇಲ್ವಿಚಾರಣೆ ಮಾಡುವುದು.

ಮೆ. ಮೋದಿ ಧವಳಗಿ ಅಂಡ್ ಕಂ., ಚಾರ್ಟರ್ಡ್ ಅಕೌಂಟೆಂಟ್‌ರವರ ಸೇವೆ ತೃಪ್ತಿಕರವಾಗಿಲ್ಲದಿರುವ ಬಗ್ಗೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಸಹಾಯಕರು ನಿಯಂತ್ರಕರು–ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಇವರಿಂದ ಸಾಕಷ್ಟು ದೂರುಗಳು ಪ್ರಗತಿ ಪರಿಶೀಲನೆ ಸಭೆಯಲ್ಲಿ ಬಂದಿರುತ್ತವೆ ಹಾಗೂ ಆಂತರಿಕ ಲೆಕ್ಕ ಪರಿಶೋಧನೆ ವರದಿಗಳಲ್ಲಿಯು ಸಹ ಲೆಕ್ಕ ಪುಸ್ತಕಗಳ ಅಸಮರ್ಪಕ ನಿರ್ವಹಣೆ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಸದರಿಯವರ ಸೇವೆ ಪಡೆಯುವ/ಮುಂದುವರಿಸುವ ಬಗ್ಗೆ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯನ್ನು ಸಂಪರ್ಕಿಸಿ ಕ್ರಮ ಕೈಗೊಳ್ಳುವುದು.

ತಮ್ಮ ವಿಶ್ವಾಸಿ,

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2011–12ನೇ ಸಾಲಿಗೆ ಮೊದಲನೇ ಕಂತಿನ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ :**
1. ಸರ್ಕಾರದ ಆದೇ ಸಂ. ಗ್ರಾಅಪ.03.ಆಂಅಸ.2011 ದಿನಾಂಕ : 01.04.2011 ಹಾಗೂ 02.04.11
2. ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ.ಪಿಸಿ ಎಂ.13053/5/1/2011 ಎಂಎಲ್‌ಪಿ ದಿನಾಂಕ : 23.3.2011.
3. ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ. ಪಿಸಿ(ಪಿ) 19/320/ಎಸ್‌ಸಿಪಿ/2011–ಡಬ್ಲ್ಯೂಜಿಎಸ್ ದಿನಾಂಕ : 11.8.2011.
4. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ CCS No. FD.13 BGL-2010 ದಿನಾಂಕ : 23.8.2001.

* * *

## ಪ್ರಸ್ತಾವನೆ

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನವನ್ನು ಮೇಲೆ ಓದಲಾದ ಪತ್ರ (1)ರಂತೆ 2011–12ನೇ ಸಾಲಿನಲ್ಲಿ ಮುಂದುವರೆಸಲಾಗಿದೆ. ಭಾರತ ಸರ್ಕಾರದ ಯೋಜನಾ ಆಯೋಗದ ಪಶ್ಚಿಮ ಘಟ್ಟಗಳ ಸಚಿವಾಲಯವು ಮೇಲೆ ಓದಲಾದ ಪತ್ರ (2)ರಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2011–12ನೇ ಸಾಲಿನಲ್ಲಿ ₹. 3230.00 ಲಕ್ಷ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಇದರಲ್ಲಿ ಶೇ. 90 ಭಾಗ ಅಂದರೆ ₹. 2907.00 ಲಕ್ಷ ಕೇಂದ್ರ ಸರ್ಕಾರದ ಬಿಡುಗಡೆ ಮಾಡಲಿರುವ ನಿಧಿ ರೂಪದ್ದಾಗಿದ್ದು, ಉಳಿಕೆ ಶೇ. 10 ಭಾಗ ಅಂದರೆ ರಾಜ್ಯದ ಪಾಲು ₹. 323.00 ಲಕ್ಷಗಳು ಆಗಿರುತ್ತದೆ. ಕೇಂದ್ರ ಸರ್ಕಾರದ ಯೋಜನಾ ಆಯೋಗವು ಮೇಲೆ ಓದಲಾದ ಪತ್ರ (3)ರಲ್ಲಿ ಪ್ರಸಕ್ತ ಸಾಲಿನ ಒಟ್ಟಾರೆ ಅನುದಾನ ₹. 3230.00 ಲಕ್ಷಗಳ ಪೈಕಿ ಶೇ. 90ರಷ್ಟು ಅಂದರೆ ₹. 2907.00 ಲಕ್ಷಗಳಲ್ಲಿ ಶೇ. 75ರಷ್ಟು ವಿಶೇಷ ಕೇಂದ್ರ ಅನುದಾನದ ನಿಧಿ ಭಾಗದ ಮೊತ್ತವಾದ ₹. 2180.25 ಲಕ್ಷಗಳನ್ನು ಮೊದಲನೇ ಕಂತಿನ ಅನುದಾನವಾಗಿ ರಾಜ್ಯಕ್ಕೆ ಬಿಡುಗಡೆ ಮಾಡಿದೆ. ಈ ಅನುದಾನವು ರಾಜ್ಯ ಸರ್ಕಾರದ ಖಾತೆಗೆ ಜಮಾ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ಮೇಲೆ ಓದಲಾದ ಪತ್ರ (4)ರಂತೆ ಜಮಾ ದೃಢೀಕರಣ ಪತ್ರವನ್ನು ನೀಡಿರುತ್ತದೆ. ಈ ಅನುದಾನದ ಜೊತೆಗೆ ರಾಜ್ಯದ ಪಾಲಿನ ಶೇ. 10 ಅನುದಾನವಾದ ₹. 242.25 ಲಕ್ಷಗಳನ್ನು ಸೇರಿಸಿ ರಾಜ್ಯದ ಸಂಬಂಧಪಟ್ಟ 11 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದುದರಿಂದ ಈ ಆದೇಶ.

### ಸರ್ಕಾರದ ಆದೇಶ ಸಂ. ಗ್ರಾಅಪ.3.ಪಘಯೋ.2011 ಬೆಂಗಳೂರು, ದಿನಾಂಕ : 25–08–2001

ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು 2011–12ನೇ ಸಾಲಿನಲ್ಲಿ ಅನುಮೋದಿತ ಕ್ರಿಯಾ ಯೋಜನೆಯ ಅನ್ವಯ ಅನುಷ್ಠಾನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಮೊದಲನೇ ಕಂತಿನ ವಿಶೇಷ ಕೇಂದ್ರ ಅನುದಾನ ₹. 2180.25 ಲಕ್ಷ ಮತ್ತು ರಾಜ್ಯದ ಪಾಲಿನ ಶೇ. 10ರ ಅನುದಾನವಾದ ₹. 242.25 ಲಕ್ಷಗಳನ್ನು ಸೇರಿಸಿ ಒಟ್ಟಾರೆ ₹. 2422.50 ಲಕ್ಷಗಳ ಪೈಕಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಯೋಜನಾ ಕೋಶಕ್ಕೆ ನಿಗದಿಯಾಗಿದ್ದ ₹. 46.57 ಲಕ್ಷ ಅನುದಾನವನ್ನು ತಾತ್ಕಾಲಿಕವಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಭರಿಸಲು ಆರ್ಥಿಕ ಇಲಾಖೆಯ ಆದೇಶ ಸಂ. ಅಇ.226. ವೆಚ್ಚ–6.2011 ದಿನಾಂಕ : 28.4.2011ರನ್ವಯ ಈ ಅನುದಾನದಲ್ಲಿಯೂ ಸಹ ಶೇ. 75ರಷ್ಟು ಅಂದರೆ 34.93 ಲಕ್ಷಗಳನ್ನು ಅಮಾನತ್ತಿನಲ್ಲಿಟ್ಟು ಉಳಿದ ಅನುದಾನ ₹. 2387.572 ಲಕ್ಷಗಳನ್ನು (₹. ಇಪ್ಪತ್ತ ಮೂರು ಕೋಟಿ ಎಂಭತ್ತೇಳು ಲಕ್ಷದ ಐವತ್ತೇಳು ಸಾವಿರದ ಇನ್ನೂರು ಮಾತ್ರ) ರಾಜ್ಯದ 11 ಜಿಲ್ಲಾ ಪಂಚಾಯತಿಗಳಿಗೆ ಅನುಬಂಧ–1ರಲ್ಲಿ ತೋರಿಸಿರುವಂತೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

1. 2011–12ನೇ ಸಾಲಿನಲ್ಲಿ ನಿಮ್ಮ ಜಿಲ್ಲೆಯ ಅನುಮೋದಿತ ಕ್ರಿಯಾಯೋಜನೆಯಲ್ಲಿ ನಮೂದಿಸಿರುವ ಕಾರ್ಯಕ್ರಮಗಳನ್ನು ಮಾತ್ರ ನಿಮ್ಮ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನಕ್ಕೊಳಪಟ್ಟು ಅನುಷ್ಠಾನಗೊಳಿಸುವುದು.

2. ಎಸ್‌ಸಿಪಿ/ಟಿಎಸ್‌ಪಿ ಅಡಿ ಬಿಡುಗಡೆ ಆದ ಹಣವನ್ನು ಆದ್ಯತೆ ಮೇರೆಗೆ ಕಾರ್ಯಕ್ರಮ ಕೈಗೊಂಡು ಸಂಪೂರ್ಣವಾಗಿ ವೆಚ್ಚ ಮಾಡಬೇಕು.

3. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸುತ್ತಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು.

4. ಒಂದು ವಲಯಕ್ಕೆ ನಿಗದಿಪಡಿಸಿರುವ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು.

5. ಸಾಂಬಾರು ಮಂಡಳಿಯ ಕಾರ್ಯಕ್ರಮಗಳಿಗೆ ಪ್ರಸ್ತುತ ಕಂತಿನಲ್ಲಿ ಒದಗಿಸಿರುವ ಅನುದಾನ ₹. 5.02 ಲಕ್ಷಗಳನ್ನು ಸದರಿ ಮಂಡಳಿಗೆ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯು ಬಿಡುಗಡೆ ಮಾಡುವುದು.

6. 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜರೂರಾಗಿ ಮತ್ತು ಸಂಪೂರ್ಣವಾಗಿ ಖರ್ಚು ಮಾಡತಕ್ಕದ್ದು. ಒಂದು ವೇಳೆ ಖರ್ಚು ಮಾಡದಿದ್ದಲ್ಲಿ 2011–12ನೇ ಸಾಲಿಗೆ ನಿಮ್ಮ ಜಿಲ್ಲೆಯ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಸಮಯದಲ್ಲಿ ಹೊಂದಾಣಿಕೆ ಮಾಡಲಾಗುವುದು ಹಾಗೂ ಪ್ರಸಕ್ತ ಸಾಲಿನ ಮೊದಲನೇ ಕಂತಿನ ಅನುದಾನದಲ್ಲಿ ಶೇಕಡಾ 60ಕ್ಕಿಂತ ಹೆಚ್ಚಾಗಿ ಖರ್ಚು ಮಾಡಿದಲ್ಲಿ ಮಾತ್ರ ಎರಡನೇ ಕಂತಿನ ಅನುದಾನ ಈ ಸಾಲಿನಲ್ಲಿ ಕೇಂದ್ರದಿಂದ ಬಿಡುಗಡೆಯಾಗಲಿದೆ ಎಂಬ ಅಂಶವನ್ನು ಮುಖ್ಯವಾಗಿ ಗಮನಿಸುವುದು ಹಾಗೂ 2010–11ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಖರ್ಚಾದ ಬಗ್ಗೆ ಆಡಿಟ್ ವರದಿ ಹಾಗೂ ವಿನಿಯೋಗ ಪತ್ರವನ್ನು ಆದ್ಯತೆ ಮೇಲೆ ಸಲ್ಲಿಸುವುದು.

7. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಪ್ರತಿ ತ್ರೈಮಾಸಿಕ ವರದಿಯನ್ನು ಸಕಾಲದಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು.

8. ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳು ಸಹಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಖಜಾನೆಯಿಂದ ಪಡೆಯುವುದು.

**ಈ ಯೋಜನೆಯಡಿ ಈ ಸಾಲಿಗೆ ಮೀಸಲಿಟ್ಟಿರುವ ಅನುದಾನವನ್ನು ಜಿಲ್ಲಾ ವಲಯದ ಲೆಕ್ಕಶೀರ್ಷಿಕೆ 2551-01-198-6-02ರಡಿ ಭರಿಸುವುದು.**

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ.ಗ್ರಾಅಪ.2.ಪಿಬಿಎಸ್.2011.12 ದಿನಾಂಕ : 25–08–2001ರಲ್ಲಿ ಸಹಮತಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪಿ. ಕುಮಾರ್)
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು
ಹಾಗೂ ಪದ ನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಅನುಬಂಧ–1

### ಸರ್ಕಾರದ ಆದೇಶ ಸಂ.ಗ್ರಾ.ಅಪ.3.ಪಘಯೋ.2011 ಬೆಂಗಳೂರು, ದಿನಾಂಕ : 25-08-2011

### ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2011-12ನೇ ಸಾಲಿನ ಜಿಲ್ಲಾವಾರು ಮೊದಲನೇ ಕಂತಿನ ಅನುದಾನ ಬಿಡುಗಡೆ ತಃಖ್ತೆ

(₹.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | 2011-12ನೇ ಸಾಲಿನ ಜಿಲ್ಲಾವಾರು ಅನುದಾನ ಹಂಚಿಕೆ | ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿರುವ ಮೊದಲನೇ ಕಂತಿನ ಅನುದಾನ | | | ಕಾಲಂ 4ರ ಪೈಕಿ ಸಾಂಬಾರು ಮಂಡಳಿಗೆ ಬಿಡುಗಡೆ ಆಗಿರುವ ಅನುದಾನ |
|---|---|---|---|---|---|---|
| | | | ಒಟ್ಟು ಮೊತ್ತ | ಕಾಲಂ 4ರ ಪೈಕಿ SCP ಗೆ ಬಿಡುಗಡೆ ಮಾಡಬೇಕಾದ ಅನುದಾನ | ಕಾಲಂ 4ರ ಪೈಕಿ TSP ಗೆ ಬಿಡುಗಡೆ ಮಾಡಬೇಕಾದ ಅನುದಾನ | |
| 1 | 2 | 3 | 4 | 5 | 6 | 7 |
| 1. | ಬೆಳಗಾಂ | 514.530 | 385.898 | 41.918 | 51.713 | – |
| 2. | ಚಾಮರಾಜನಗರ | 94.820 | 71.115 | 13403 | 6,683 | – |
| 3. | ಚಿಕ್ಕಮಗಳೂರು | 303.990 | 227.990 | 40.215 | 9.435 | 5.02 |
| 4. | ದಕ್ಷಿಣ ಕನ್ನಡ | 226.930 | 170.198 | 23.693 | 12.225 | – |
| 5. | ಧಾರವಾಡ | 73.920 | 55.440 | 4.365 | 4.920 | – |
| 6. | ಹಾಸನ | 243.820 | 182.865 | 49.620 | 3.300 | – |
| 7. | ಕೊಡಗು | 272.690 | 204.518 | 21.345 | 16.163 | – |
| 8. | ಮೈಸೂರು | 106.650 | 79.988 | 22.898 | 17.783 | – |
| 9. | ಶಿವಮೊಗ್ಗ | 451.500 | 338.625 | 44.318 | 10.275 | – |
| 10. | ಉತ್ತರ ಕನ್ನಡ | 568.040 | 426.030 | 19.845 | 5.153 | – |
| 11. | ಉಡುಪಿ | 326.540 | 244.905 | 18.383 | 12.350 | – |
| | **ಒಟ್ಟು** | **3183.430** | **2387.572** | **300.000** | **150.00** | **5.02** |
| 12. | ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ ಯೋಜನಾ ಕೋಶ | 46.570 | 34.928 (ಅಮಾನತ್ತಿನಲ್ಲಿ ಡಲಾಗಿದೆ) | – | – | – |
| | **ಜುಮ್ಲಾ** | **3230.000** | **2442.500** | **300.000** | **150.000** | **5.02** |

(ಪಿ. ಕುಮಾರ್)
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು
ಹಾಗೂ ಪದ ನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ನಂ. ಗ್ರಾಅಪ : 206 : ಜಿಪಸ : 2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 08–09–2011

## ಸುತ್ತೋಲೆ

**ವಿಷಯ** : ಅಂಗವಿಕಲರಿಗೆ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಕಟ್ಟಡಗಳಲ್ಲಿ ಅಡೆತಡೆ ರಹಿತ ವಾತಾವರಣ ನಿರ್ಮಿಸುವ ಬಗ್ಗೆ.

**ಉಲ್ಲೇಖ** : ಸರ್ಕಾರಿ ಸುತ್ತೋಲೆ ಸಂಖ್ಯೆ : ಗ್ರಾಅಪ : 25 : ಜಿಪಸ : 2010 ದಿನಾಂಕ : 01–02–2010 ಮತ್ತು 01–04–2010.

* * *

ಬೆಂಗಳೂರು ಮಹಾನಗರ ಪಾಲಿಕೆಯ ಅಧಿಸೂಚನೆ ಸಂಖ್ಯೆ : ಜೆಡಿಡಿಪಿ/ಪಿಎಸ್/ಪಿಆರ್/20–03, ದಿನಾಂಕ : 30–06–2004ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡಗಳ ಉಪವಿಧಿ 2003ನ್ನು ಹೊರಡಿಸಿದೆ. ಈ ಅಧಿಸೂಚನೆಯಲ್ಲಿ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ಕ್ಕೆ ಸಂಬಂಧಿಸಿದ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ದಿನಾಂಕ : 01–02–2010 ಮತ್ತು 1–4–2010 ರಂದು ಸರ್ಕಾರವು ಸುತ್ತೋಲೆ ಸಂಖ್ಯೆ : ಗ್ರಾಅಪ : 25 : ಜಿಪಸ : 2010ರ ಮೂಲಕ ಎಲ್ಲಾ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಕಟ್ಟಡಗಳಲ್ಲಿ ಅಂಗವಿಕಲರಿಗೆ ಶೌಚಾಲಯ, ಇಳಿಜಾರು ಮಾರ್ಗ, ಇಲಿವೇಟರ್ ಮತ್ತು ಲಿಫ್ಟ್‌ಗಳಲ್ಲಿ ಬ್ರೈಲ್ ಸಂಕೇತ ಮತ್ತು ಶಬ್ದ ಸಂಕೇತ ಕಲ್ಪಿಸುವ ನಿರ್ದೇಶನ ನೀಡಲಾಗಿದೆ. ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರಂತೆ ಅಂಗವಿಕಲ ವ್ಯಕ್ತಿಗಳಿಗೆ ಹಲವಾರು ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಅದರಂತೆ ಸಾರ್ವಜನಿಕ, ಅರೆ ಸಾರ್ವಜನಿಕ ಕಟ್ಟಡಗಳಲ್ಲಿ ಅಂಗವಿಕಲ ಯಾವುದೇ ಅಡೆ ತಡೆ ಇಲ್ಲದೆ ಓಡಾಡುವ ವಾತಾವರಣ ನಿರ್ಮಿಸಬೇಕಾಗಿದೆ.

2) ಮುಂದುವರೆದು, ರಾಜ್ಯದಲ್ಲಿರುವ ಅಂಗವಿಕಲರ ಕಲ್ಯಾಣಕ್ಕಾಗಿ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿಯ ಮಿತಿಗೊಳಪಟ್ಟು ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಕಲಂ 46ರಂತೆ ಈ ಕೆಳಕಂಡ ಸೌಲಭ್ಯಗಳನ್ನು ಇದುವರೆಗೆ ಕಲ್ಪಿಸದೆ ಇರುವ ಪ್ರಕರಣಗಳಲ್ಲಿ ಕಲ್ಪಿಸಲು ಕ್ರಮ ಕೈಗೊಳ್ಳುವುದು.

**"46 ಕಟ್ಟಡ ಪ್ರದೇಶದಲ್ಲಿ ಸಮಾನ ಅವಕಾಶ ಮಾಡಿಕೊಡುವುದು :** ಸಮುಚ್ಛಿತ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿ ಮಿತಿಗಳೊಳಗೆ ಈ ಮುಂದಿನವುಗಳಿಗೆ ಅವಕಾಶ ಕಲ್ಪಿಸತಕ್ಕದ್ದು.

ಎ) ಸಾರ್ವಜನಿಕ ಕಟ್ಟಡಗಳಲ್ಲಿ ಇಳಿಜಾರು ವ್ಯವಸ್ಥೆ ಹಾಗೂ ರೈಲಿಂಗ್ ವ್ಯವಸ್ಥೆ ಕಲ್ಪಿಸುವುದು.

ಬಿ) ಗಾಲಿ ಕುರ್ಚಿ ಬಳಕೆದಾರರಿಗೆ ಅನುಕೂಲವಾಗುವಂತೆ ಶೌಚಾಲಯಗಳ ನಿರ್ಮಾಣ

ಸಿ) ಎಲಿವೇಟರುಗಳಲ್ಲಿ ಅಥವಾ ಲಿಫ್ಟ್‌ಗಳಲ್ಲಿ ಬ್ರೈಲ್ ಸಂಕೇತಗಳನ್ನು ಮತ್ತು ಶಬ್ದ ಸಂಕೇತಗಳನ್ನು ಕಲ್ಪಿಸುವುದು.

ಡಿ) ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಇತರೆ ವೈದ್ಯಕೀಯ ಚಿಕಿತ್ಸಾ ಸಂಸ್ಥೆ ಮತ್ತು ಪುನರ್ ವಸತಿ ಸಂಸ್ಥೆಗಳಲ್ಲಿ ಇಳಿಜಾರು ಮಾರ್ಗ ಕಲ್ಪಿಸುವುದು."

3) ಮೇಲ್ಕಂಡಂತೆ ಕ್ರಮ ಕೈಗೊಳ್ಳುವಂತೆ/ಕೈಗೊಂಡ ಬಗ್ಗೆ ಸಕ್ಷಮ ಸಂಸ್ಥೆಗಳು 6 ತಿಂಗಳಿಗೊಮ್ಮೆ ಸರ್ಕಾರಕ್ಕೆ ಪ್ರಗತಿ ವರದಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಹೊಸದಾಗಿ ನಿರ್ಮಿಸುವ ಸಾರ್ವಜನಿಕ ಕಟ್ಟಡಗಳಲ್ಲಿ ಕಡ್ಡಾಯವಾಗಿ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಪ್ರಕಾರ ಅಂಗವಿಕಲರಿಗೆ ಸೌಲಭ್ಯಗಳನ್ನು ಕಲ್ಪಿಸಬೇಕೆಂಬುದನ್ನು ಕಟ್ಟಡ ನಕ್ಷೆ ಅನುಮೋದನೆ ನೀಡುವಾಗ ಕಡ್ಡಾಯಗೊಳಿಸಬೇಕು. ಕಟ್ಟಡ ಅಂತಿಮವಾಗಿ ನಿರ್ಮಾಣಗೊಂಡ ನಂತರ ಪೂರ್ಣಗೊಂಡ ಪ್ರಮಾಣ ಪತ್ರ ನೀಡುವಾಗ ಸಂಬಂಧಪಟ್ಟ ಪ್ರಾಧಿಕಾರಿಗಳ ಸೌಲಭ್ಯಗಳನ್ನು ಅಳವಡಿಸಿಕೊಂಡಿದ್ದಾರೆಯೇ ಎಂಬುದನ್ನು ದೃಢೀಕರಿಸಿಕೊಳ್ಳಬೇಕು.

4) ಈಗಾಗಲೇ ನಿರ್ಮಿಸಿರುವ ಸಾರ್ವಜನಿಕ ಕಟ್ಟಡಗಳನ್ನು ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಪ್ರಕಾರ ಕಟ್ಟಡಗಳನ್ನು ಸೂಕ್ತವಾಗಿ ಮಾರ್ಪಡಿಸಿ ಅಂಗವಿಕಲರಿಗೆ ಒಂದು ನಿಗದಿತ ಅವಧಿಯನ್ನು ಗೊತ್ತುಪಡಿಸಿಕೊಂಡು, ಆದ್ಯತೆ ಮೇರೆಗೆ ಸೌಲಭ್ಯಗಳನ್ನು ಕಲ್ಪಿಸಬೇಕು. ಸರ್ಕಾರಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು.

5) ಈ ಸುತ್ತೋಲೆಯಲ್ಲಿನ ಅಂಶಗಳನ್ನು ಅಂಶಗಳನ್ನು ಚಾಚು ತಪ್ಪದೆ ಕಡ್ಡಾಯವಾಗಿ ಪಾಲಿಸತಕ್ಕದ್ದು. ಸದರಿ ಸುತ್ತೋಲೆಯ ಅಂಶಗಳನ್ನು ಪಾಲಿಸಲು ವಿಫಲವಾದ ಸಂಬಂಧಪಟ್ಟ ಸಕ್ಷಮ ಅಧಿಕಾರಗಳನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಿ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು.

(ಸ್ವರ್ಣಲತ ಎಂ. ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ/29/ಗ್ರಾಪಂಸಿ/2011 (ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 26-08-2011

ಇಂದ,

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೇ,

**ವಿಷಯ** : ಗ್ರಾಮ ಪಂಚಾಯಿತಿಗಳಲ್ಲಿ ಜೋಡಿ ನಮೂದು ಲೆಕ್ಕ ಪದ್ಧತಿ ನಿರ್ವಹಿಸಲು ನೇಮಿಸಿಕೊಂಡಿರುವ ಚಾರ್ಟರ್ಡ್ ಅಕೌಂಟೆಂಟ್ ಫರ್ಮುಗಳಿಗೆ ಸಂಭಾವನೆ ಪಾವತಿಸುವ ಬಗ್ಗೆ.

**ಉಲ್ಲೇಖ** : ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 225 ಗ್ರಾಸ್ವಯೋ 2007, ದಿನಾಂಕ : 16-12-2008.

* * *

ಗ್ರಾಮ ಪಂಚಾಯಿತಿಗಳಲ್ಲಿ ಜೋಡಿ ನಮೂದು ಲೆಕ್ಕ ಪದ್ಧತಿಯಲ್ಲಿ ಲೆಕ್ಕ ನಿರ್ವಹಿಸಲು ನೇಮಿಸಿಕೊಳ್ಳಲಾಗಿರುವ ಚಾರ್ಟರ್ಡ್ ಅಕೌಂಟೆಂಟ್ ಫರ್ಮುಗಳಿಗೆ ಶಾಸನಬದ್ಧ ಅನುದಾನದಲ್ಲಿ ಸಂಭಾವನೆ ಪಾವತಿಸಲು ಜಿಲ್ಲಾ ಪಂಚಾಯಿತಿ ಹಂತದಲ್ಲಿ ಕ್ರಮ ವಹಿಸುವಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿತ್ತು.

ಆದರೆ ಶಾಸನಬದ್ಧ ಅನುದಾನದಿಂದ ಶೇಕಡ 60ರಷ್ಟು ಮೊತ್ತವನ್ನು ಗ್ರಾಮ ಪಂಚಾಯಿತಿಗಳ ವಿದ್ಯುತ್ ಶುಲ್ಕಕ್ಕೆ ನೀಡಿ, ಶೇಕಡ 40ರಷ್ಟು ಅನುದಾನವನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನಕ್ಕಾಗಿ ನೀಡಲಾಗುತ್ತಿದೆ. ಈ ಶೇಕಡ 40ರ ಅನುದಾನದಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಫರ್ಮುಗಳಿಗೆ ಸಂಭಾವನೆ ಪಾವತಿಸಿದಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನಕ್ಕೆ ಅನುದಾನದ ಕೊರತೆಯಾಗುವುದರಿಂದ ಉಲ್ಲೇಖಿತ ಸರ್ಕಾರದ ಪತ್ರವನ್ನು ಈ ಮೂಲಕ ಹಿಂತೆಗೆದುಕೊಂಡಿದೆ. ಮತ್ತು **ಚಾರ್ಟರ್ಡ್ ಅಕೌಂಟೆಂಟ್ ಫರ್ಮುಗಳಿಗೆ ಗ್ರಾಮ ಪಂಚಾಯಿತಿಯ ಸ್ವಂತ ಆದಾಯದಿಂದ ಸಂಭಾವನೆ ಪಾವತಿಸಲು ಕ್ರಮ ವಹಿಸುವಂತೆ** ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಸ್ವರ್ಣಲತ ಎಂ. ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ



ಕನಕಪುರ ತಾಲ್ಲೂಕಿನ
ಪುಟ್ಟೇಗೌಡನ ದೊಡ್ಡಿ
ಗ್ರಾಮದಲ್ಲಿ ನಾಲಾಬದು
ನಿರ್ಮಾಣ



ಬಸವನ ಬನ್ನಿಕುಪ್ಪೆ
ಗ್ರಾಮದಲ್ಲಿ ರಸ್ತೆ
ಸೇತುವೆ ನಿರ್ಮಾಣ

# KARNATAKA VIKASA : OCTOBER, 2011

A Monthly Magazine of Rural Development and Panchayat Raj Department, Government of Karnataka

Regd. No. KA/BGGPO/2531/09-11. Licence to post "Without Prepayment" WPP-32

RNI. No. 28103, KAR, KAN-02190, Total No. of Pages 52. Despatch Date : 1st week of every month






ಬೆಲೆ : 5 ರೂಪಾಯಿಗಳು

Despatcher

**OFFICE OF THE CHIEF EDITOR, KARNATAKA VIKASA**

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

**Printed at : GEETANJALI GRAPHICS**

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346